

ಕರ್ನಾಟಕ ಸರ್ಕಾರ

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ. ಮೈಸೂರು

## 2019–20ನೇ ಸಾಲಿನ

# ವಾರ್ಷಿಕ ವರದಿ



ಶ್ರೀ ವೆಂಕಟೇಶ್.ಟಿ

ಆಯುಕ್ತರು

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣ,

ದೊಡ್ಡಕೆರೆ ಮೈದಾನ, ಮೈಸೂರು- 570010

# ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ.

# ಮೈಸೂರು

**ಪ್ರಾಸ್ತಾವಿಕ:**

1885ರಲ್ಲಿ ಅಸ್ತಿತ್ವಕ್ಕೆ ಬಂದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯದ ಜೊತೆ 2004ರಲ್ಲಿ ಅಸ್ತಿತ್ವಕ್ಕೆ ಬಂದ ಪರಂಪರೆ ಇಲಾಖೆಯನ್ನು ಸರ್ಕಾರಿ ಆದೇಶದ ಸಂಖ್ಯೆ: ಕಸಂವಾಪ್ರ 10 ಕೆಎಂಯು 2012 ದಿನಾಂಕ 23-2-2012ರಲ್ಲಿ ವಿಲೀನಗೊಳಿಸಿ ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯನ್ನು ಪುನರ್ ರಚಿಸಿ ಆಯುಕ್ತರನ್ನು ಇಲಾಖೆಯ ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ.

ಸರ್ಕಾರದ ಆದೇಶದ ಸಂಖ್ಯೆ:ಕಸಂವಾ 234 ಕೆಎಂಯು 2014 ದಿನಾಂಕ 13.03.2015ರಲ್ಲಿ ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯನ್ನು ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ (Archaeology, Museums and Heritage Department) ಎಂದು ಮರು ನಾಮಕರಣ ಮಾಡಿ ಆದೇಶಿಸಿದೆ.

ಪ್ರಸ್ತುತ ಇಲಾಖೆಯ ಕೇಂದ್ರ ಕಛೇರಿಯು ಮೈಸೂರಿನಲ್ಲಿದ್ದು ಕಲೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಯೋಜನೆ ಶೀರ್ಷಿಕೆ ಅಡಿಯಲ್ಲಿ ಇಲಾಖೆಯ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಬರುತ್ತಿದೆ.

ಈ ಇಲಾಖೆಯ ಮೂಲಭೂತ ಕಾರ್ಯ ಚಟುವಟಿಕೆಗಳೆಂದರೆ ಅನ್ವೇಷಣೆ, ಉತ್ಖನನ, ಪ್ರಾಚೀನ ಸ್ಮಾರಕಗಳ ಸಂರಕ್ಷಣೆ, ಶಾಸನಗಳ ಸರ್ವೇಕ್ಷಣೆ, ಪ್ರಾಚೀನ ನಾಣ್ಯಗಳ ಅಧ್ಯಯನ, ಸಂಶೋಧನಾ ಗ್ರಂಥಗಳ ಪ್ರಕಟಣೆ, ವಸ್ತುಸಂಗ್ರಹಾಲಯಗಳ ನಿರ್ವಹಣೆ ಹಾಗೂ ಅಭಿವೃದ್ಧಿ ಮತ್ತು ಪರಂಪರೆ ಕಾರ್ಯ ಚಟುವಟಿಕೆಗಳು, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸಿ ಯಶಸ್ವಿಯಾಗಿ ಅನುಷ್ಠಾನಗೊಳಿಸುತ್ತಿದೆ ಹಾಗೂ ಅವಜ್ಞತೆಗೆ ತುತ್ತಾಗಿರುವ ಅಮೂಲ್ಯವಾದ ಪುರಾತನ ಶಿಲ್ಪಗಳು, ಪ್ರಾಚೀನ ಶಿಲಾಶಾಸನಗಳು, ನಾಣ್ಯಗಳು, ತಾಮ್ರ ಪಟಗಳು ಮುಂತಾದವುಗಳನ್ನು ಇಲಾಖೆಯ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿ ಅವುಗಳನ್ನು ಮುಂದಿನ ಪೀಳಿಗೆಗೆ ಸಂರಕ್ಷಿಸುವ ಹಾಗೂ ಸಾರ್ವಜನಿಕ ವೀಕ್ಷಣೆಗೆ ತೆರೆದಿಡುವ ಜವಾಬ್ದಾರಿಯನ್ನು ಸಹ ಇಲಾಖೆಯು ನಿರ್ವಹಿಸುತ್ತಿದೆ.

ಐತಿಹಾಸಿಕ ಹಿನ್ನೆಲೆಯುಳ್ಳ ಮೈಸೂರು, ಶ್ರೀರಂಗಪಟ್ಟಣ, ಬೀದರ್, ಕಲಬುರಗಿ, ಬಿಜಾಪುರ ಹಾಗೂ ಕಿತ್ತೂರು ಸೇರಿದಂತೆ ಒಟ್ಟು ಆರು ಸ್ಥಳಗಳನ್ನು 2004ರಲ್ಲಿ ಮತ್ತು 2012-13ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಸನ್ನತಿ, ನಾಗಾವಿ, ಕಮ್ಮಟಗಿ, ಬಾದಾಮಿ, ಐಹೊಳೆ, ಬೆಂಗಳೂರು, ಲಕ್ಕುಂಡಿ, ಬನವಾಸಿ, ತಲಕಾಡು, ಬಳ್ಳಿಗಾವಿ, ಬೇಲೂರು, ಹಳೇಬೀಡು, ಮಳಖೇಡ, ಮೇಲುಕೋಟೆ ಸೇರಿದಂತೆ ಹದಿನಾಲ್ಕು ಪ್ರದೇಶಗಳನ್ನು ಪಾರಂಪರಿಕ ಪ್ರದೇಶಗಳೆಂದು ಘೋಷಣೆ ಮಾಡಲಾಗಿದೆ. ಪ್ರಸ್ತುತ 20 ಪಾರಂಪರಿಕ ಪ್ರದೇಶಗಳಿದ್ದು ಅವುಗಳಲ್ಲಿರುವ ಸ್ಮಾರಕಗಳ, ಕಟ್ಟಡಗಳ ಇನ್‌ವೆಂಟರಿ ತಯಾರಿಸಿ, ಸಮಗ್ರ ಅಭಿವೃದ್ಧಿ ಯೋಜನೆಯಂತೆ ಸಂರಕ್ಷಣಾ ಕಾರ್ಯವನ್ನು ಕೈಗೊಳ್ಳುತ್ತಿದೆ.

ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ 5 ಉಪನಿರ್ದೇಶಕರ ಕಛೇರಿಗಳಿದ್ದು ಇವುಗಳು ಮೈಸೂರು, (ಪರಂಪರೆ) ಕಲಬುರಗಿ, ಬೆಂಗಳೂರು, ಧಾರವಾಡ ಹಾಗೂ ಕಮಲಾಪುರ (ಹಂಪಿ)ಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಬೆಂಗಳೂರು, ಚಿತ್ರದುರ್ಗ, ಶಿವಮೊಗ್ಗ, ಮೈಸೂರು, ಶ್ರೀರಂಗಪಟ್ಟಣ, ಯಳಂದೂರು, ಹಾಸನ, ಮಡಿಕೇರಿ, ಮಂಗಳೂರು, ಕಿತ್ತೂರು, ಗದಗ, ಕಲಬುರಗಿ, ರಾಯಚೂರು, ಹೂವಿನಹಡಗಲಿ, ಬಸವಕಲ್ಯಾಣ ಮತ್ತು ಅಥಣಿ (ಶಿಲ್ಪಕಲಾ ಗ್ಯಾಲರಿ) ಸೇರಿದಂತೆ ಒಟ್ಟು ಹದಿನಾರು ಸರ್ಕಾರಿ ಸಂಗ್ರಹಾಲಯಗಳು ಮತ್ತು ಬೆಂಗಳೂರಿನ ವೆಂಕಟಪ್ಪ ಚಿತ್ರಶಾಲೆ ಕಲಾ ಗ್ಯಾಲರಿ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿವೆ.

## 1. ಸಿಬ್ಬಂದಿಯ ವಿವರಗಳು:

| ಹುದ್ದೆಗಳ ಸಮೂಹ | ಮಂಜೂರಾಗಿರುವ ಹುದ್ದೆಗಳು | ಭರ್ತಿಯಾಗಿರುವ ಹುದ್ದೆಗಳು | ಪುರುಷರು | ಮಹಿಳೆಯರು | ಖಾಲಿಯಿರುವ ಹುದ್ದೆಗಳ ಸಂಖ್ಯೆ |
|---|---|---|---|---|---|
| ಎ | 12 | 5 | 04 | 01 | 7 |
| ಬಿ | 07 | 06 | 04 | 02 | 01 |
| ಸಿ | 84 | 41 | 27 | 14 | 43 |
| ಡಿ | 116 | 36 | 24 | 12 | 80 |
| **ಒಟ್ಟು** | **219** | **88** | **59** | **29** | **131** |

## 2. ಅಧಿಕ ಪ್ರಭಾರ:-

ಸರ್ಕಾರದ ಅಧಿಸೂಚನೆ ಸಂಖ್ಯೆ:ಕಸಂವಾ 59 ಕೆಎಂಯು 2018 ದಿನಾಂಕ:13/12/2018ರನ್ವಯ ಡಾ. ಆರ್.ಗೋಪಾಲ್, ನಿರ್ದೇಶಕರು(ವಸ್ತು ಸಂಗ್ರಹಾಲಯಗಳು), ಸರ್ಕಾರಿ ವಸ್ತು ಸಂಗ್ರಹಾಲಯ ಹಾಗೂ ವೆಂಕಟಪ್ಪ ಚಿತ್ರಶಾಲೆ, ಬೆಂಗಳೂರು, ಇವರನ್ನು ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ಇಲ್ಲಿ ಖಾಲಿ ಇರುವ ನಿರ್ದೇಶಕರು (ಪುರಾತತ್ವ) ಹುದ್ದೆಯ ಅಧಿಕ ಪ್ರಭಾರದಲ್ಲಿರಿಸಲಾಗಿದೆ.

1. ಸರ್ಕಾರದ ಅಧಿಸೂಚನೆ ಸಂಖ್ಯೆ:ಕಸಂವಾ 40 ಕೆಎಂಯು 2018 ದಿನಾಂಕ:19.03.2018ರ ಅನ್ವಯ ಶ್ರೀ ಎಸ್.ಎಂ.ಪೂಜಾರಿ, ಪುರಾತತ್ವ ಸಂರಕ್ಷಣಾ ಇಂಜಿನಿಯರ್ ಇವರನ್ನು ಉಪನಿರ್ದೇಶಕರು, ಬೆಂಗಳೂರು ವಿಭಾಗ, ಬೆಂಗಳೂರು ಈ ಹುದ್ದೆಯಲ್ಲಿ ಅಧಿಕ ಪ್ರಭಾರದಲ್ಲಿರಿಸಿದೆ.
2. ಸರ್ಕಾರದ ಅಧಿಸೂಚನೆ ಸಂಖ್ಯೆ:ಕಸಂವಾ 56 ಕೆಎಂಯು 2017 ದಿನಾಂಕ:24.06.2017ರ ಅನ್ವಯ ಡಾ.ಎಸ್.ಕೆ.ವಾಸುದೇವ್, ಪುರಾತತ್ವ ಸಂರಕ್ಷಣಾ ಇಂಜಿನಿಯರ್ ಇವರನ್ನು ಉಪ ನಿರ್ದೇಶಕರು, ಹಂಪಿ, ಕಮಲಾಪುರ ಹುದ್ದೆಯಲ್ಲಿ ಅಧಿಕ ಪ್ರಭಾರದಲ್ಲಿಡಲಾಗಿದೆ.
3. ಸರ್ಕಾರದ ಅಧಿಸೂಚನೆ ಸಂಖ್ಯೆ:ಕಸಂವಾ 81 ಕೆಎಂಯು 2018 ದಿನಾಂಕ:23.06.2018ರ ಅನ್ವಯ ಡಾ.ಎಸ್.ಕೆ.ವಾಸುದೇವ್, ಪುರಾತತ್ವ ಸಂರಕ್ಷಣಾ ಇಂಜಿನಿಯರ್ ಇವರನ್ನು ಉಪ ನಿರ್ದೇಶಕರು, ಧಾರವಾಡ ಹುದ್ದೆಯಲ್ಲಿ ಅಧಿಕ ಪ್ರಭಾರದಲ್ಲಿರಿಸಿದೆ.

4. ಸರ್ಕಾರದ ಅಧಿಸೂಚನೆ ಸಂಖ್ಯೆ: TOR/48/TDA/2019 ದಿನಾಂಕ:18.12.2019ರ ಮೇರೆಗೆ ಶ್ರೀ ಡಿ.ಶಿವಪ್ಪ, ಉಪ ನಿರ್ದೇಶಕರು(ಪ್ರಭಾರ), ಸರ್ಕಾರಿ ವಸ್ತುಸಂಗ್ರಹಾಲಯ, ಕಲಬುರಗಿ ಇವರ ವಯೋನಿವೃತ್ತಿಯಿಂದ ತೆರವಾದ ಉಪನಿರ್ದೇಶಕರು, ಕಲಬುರಗಿ ಇಲ್ಲಿನ ಹುದ್ದೆಗೆ ಶ್ರೀ ಪ್ರಹ್ಲಾದ್.ಜಿ, ಸಹಾಯಕ ನಿರ್ದೇಶಕರು, ಚಿತ್ರದುರ್ಗ ಇವರನ್ನು ಅಧಿಕ ಪ್ರಭಾರದಲ್ಲಿರಿಸಿ ನೇಮಿಸಲಾಗಿದೆ.

5. ಇಲಾಖೆಯ ಅಧಿಕೃತ ಜ್ಞಾಪನದ ಕ್ರಮಾಂಕ:ಪುಸಂಪ;ಇಎಸ್‌ಟಿ.1:ಕ.ಸಂ.13:ಬಿಡುಗಡೆ ಆದೇಶ:2018-19 ದಿನಾಂಕ:25.07.2018ರ ಮೇರೆಗೆ ಶ್ರೀ ಎಸ್.ಎಂ.ಪೂಜಾರಿ, ಪುರಾತತ್ವ ಸಂರಕ್ಷಣಾ ಇಂಜಿನಿಯರ್ (ದಕ್ಷಿಣ ವಲಯ) ಇವರನ್ನು ಪುರಾತತ್ವ ಸಂರಕ್ಷಣಾ ಇಂಜಿನಿಯರ್ (ಪರಂಪರೆ) ಹುದ್ದೆಯ ಅಧಿಕ ಪ್ರಭಾರದಲ್ಲಿ ನೇಮಿಸಲಾಗಿದೆ.

## 3. ಮುಂಬಡ್ತಿಯ ವಿವರ:

1. ಒಂದು ಕ್ಯುರೇಟರ್ ಹುದ್ದೆಗೆ ಸಹಾಯಕ ನಿರ್ದೇಶಕರ ಹುದ್ದೆಗೆ ಮುಂಬಡ್ತಿಯನ್ನು ನೀಡಲಾಗಿದೆ.
2. ಒಂದು ಶೀಘ್ರಲಿಪಿಗಾರರು-ಕಂ-ಕ್ಲರ್ಕ್ ಹುದ್ದೆಗೆ ಕಛೇರಿ ಅಧೀಕ್ಷಕರಾಗಿ ಮುಂಬಡ್ತಿಯನ್ನು ನೀಡಲಾಗಿದೆ.
3. ಒಂದು ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಮುಂಬಡ್ತಿಯನ್ನು ನೀಡಲಾಗಿದೆ.
5. ಎರಡು ಬೆರಳಚ್ಚುಗಾರ ಹುದ್ದೆಯಿಂದ ಒಂದು ಶೀಘ್ರಲಿಪಿಗಾರ-ಕಂ-ಕ್ಲರ್ಕ್ ಹುದ್ದೆಗೆ ಹಾಗೂ ಒಂದು ಹಿರಿಯ ಬೆರಳಚ್ಚುಗಾರರ ಹುದ್ದೆಗೆ ಮುಂಬಡ್ತಿಯನ್ನು ನೀಡಲಾಗಿದೆ.
6. 07 ಗ್ರೂಪ್ ಡಿ ಹುದ್ದೆಗಳಿಗೆ ಅಟೆಂಡರ್ ಹುದ್ದೆಗೆ ಮುಂಬಡ್ತಿಯನ್ನು ನೀಡಲಾಗಿದೆ.

## 4. ವೃಂದ ಮತ್ತು ನೇಮಕಾತಿ ನಿಯಮಗಳು:

ಪುರಾತತ್ವ ಮತ್ತು ಸಂಗ್ರಹಾಲಯಗಳ ಇಲಾಖೆಗೆ ಸರ್ಕಾರದ ಆದೇಶ ಸಂಖ್ಯೆ:ಐಟಿವೈ:67: ಕೆಎಂಯು: 86 ದಿನಾಂಕ 28-2-1992ರಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲಾಗಿತ್ತು. ಪ್ರಸ್ತುತ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಪುನರ್ ರಚನೆ ಕುರಿತಂತೆ, ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸಂಬಂಧಿಸಿದಂತೆ ಸರ್ಕಾರದ ಹಂತದಲ್ಲಿ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.

## 5. ಕಾಯ್ದೆ ಮತ್ತು ನಿಯಮಗಳು:

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯು ಕೆಳಕಂಡ ಕಾಯ್ದೆ ಮತ್ತು ನಿಯಮಗಳನ್ನು ಹೊಂದಿರುತ್ತದೆ.

1) ಕರ್ನಾಟಕ ಪ್ರಾಚೀನ ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಅಧಿನಿಯಮ 1961 ಮತ್ತು ನಿಯಮಗಳು 1965.

2) ಕರ್ನಾಟಕ ಗುಪ್ತನಿಧಿ ಕಾಯ್ದೆ 1962 ಮತ್ತು ನಿಯಮಗಳು 1963.

## 6. ಸಾರ್ವಜನಿಕ ಕುಂದು ಕೊರತೆಗಳು:

ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ ಕುರಿತಂತೆ ಸಾರ್ವಜನಿಕರಿಂದ ಹಾಗೂ ಸಂಘ ಸಂಸ್ಥೆಗಳಿಂದ ಸ್ಮಾರಕಗಳ ಸಂರಕ್ಷಣೆಗಾಗಿ ಮನವಿಗಳು ಬರುತ್ತಿದ್ದು, ಅವುಗಳನ್ನು ಆದ್ಯತೆಯ ಮೇರೆಗೆ ಇಲಾಖೆಯಲ್ಲಿ ಲಭ್ಯವಿರುವ ಅನುದಾನವನ್ನು ಗಮನದಲ್ಲಿರಿಸಿಕೊಂಡು ಸಂರಕ್ಷಣಾ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ.

## 7. ಇಲಾಖೆಯ ಪಿ.ಡಿ.ಖಾತೆ :.

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ಇವರ ವೈಯಕ್ತಿಕ ಠೇವಣಿ ಖಾತೆಯ ಸಂಖ್ಯೆ:06000001ನ್ನು ಉಪ ನಿರ್ದೇಶಕರು, ಜಿಲ್ಲಾ ಖಜಾನೆ ಮೈಸೂರುರವರ ಪತ್ರದ ದಿನಾಂಕ:30.10.2019ರನ್ವಯ ಖಜಾನೆ-2ಕ್ಕೆ ದಿನಾಂಕ:21.11.2019ರಂದು ಮೈಗ್ರೇಟ್ ಮಾಡಿ ರೂ.18,64,75,896/-ಗಳನ್ನು ಖಜಾನೆ-2ರ ಹೊಸ ಪಿಡಿ ಖಾತೆ ಸಂಖ್ಯೆ.27577ಎ028ನ್ನು ಸೃಜನೆ ಮಾಡಿ ವರ್ಗಾಯಿಸಿರುತ್ತಾರೆ.

ಅದರಂತೆ ಪಿಡಿ ಖಾತೆಯ ಲೆಕ್ಕಶೀರ್ಷಿಕೆ:8443-00-106-0-23ರಲ್ಲಿ 2019-20ನೇ ಸಾಲಿನ ಪ್ರಾರಂಭಿಕ ಠೇವಣಿಯಾಗಿ ರೂ.18,64,75,896/-ಗಳಿರುತ್ತದೆ ಹಾಗೂ 2019-20ನೇ ಸಾಲಿನ ಡಿಸೆಂಬರ್-2019ರ ಮಾಹೆಯ ಅಂತ್ಯಕ್ಕೆ ವಿವಿಧ ಇಲಾಖೆಗಳಿಂದ ರೂ.7,53,16,698/-ಗಳ ಅನುದಾನ ಬಿಡುಗಡೆಯಾಗಿದ್ದು, ದಿನಾಂಕ:31.03.2020ರವರೆಗೆ ಮುಂದುವರೆಸಲಾಗಿದೆ.

ಇದರನ್ವಯ 2019-20ನೇ ಸಾಲಿನಲ್ಲಿ ಈ ಕೆಳಕಂಡ ಸಂರಕ್ಷಣಾ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ ಡಿಸೆಂಬರ್-2019ರ ಮಾಹೆಯ ಅಂತ್ಯಕ್ಕೆ ಒಟ್ಟು ರೂ.6,20,64,883/-ಗಳ ಅನುದಾನವನ್ನು ವೆಚ್ಚ ಮಾಡಲಾಗಿದೆ. ವಿವರ ಇಂತಿದೆ.

| ಕ್ರ ಸಂ | ಕಾಮಗಾರಿ ಹೆಸರು | 2019-20ನೇ ಸಾಲಿನಲ್ಲಿ ಮಾಡಲಾಗಿರುವ ವೆಚ್ಚ |
|---|---|---|
| 1 | ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ ಮಂಡಳಿ ಅಭಿವೃದ್ಧಿ ಕಾರ್ಯಗಳಿಗಾಗಿ. | 7583383 |
| 2 | ಚಾಮುಂಡಿ ಬೆಟ್ಟದ, ಶ್ರೀ ಚಾಮುಂಡೇಶ್ವರಿ ದೇವಾಲಯದ ಸಮೂಹ ದೇವಾಲಯವಾದ ಮೈಸೂರು ನಗರದ ರಾಮಾನುಜ ರಸ್ತೆಯಲ್ಲಿರುವ ಶ್ರೀ ಕಾಮಕಾಮೇಶ್ವರ ದೇವಾಲಯದ ಸಂರಕ್ಷಣೆ ಹಾಗೂ ಜೀರ್ಣೋದ್ಧಾರ ಕಾಮಗಾರಿ. | 275697 |
| 3 | ಲಾಲ್‌ಬಾಗ್ ಸಸ್ಯಶಾಸ್ತ್ರೀಯ ತೋಟದಲ್ಲಿರುವ ಕೃಂಬಿಗಲ್ ಹಾಲ್ ಕಟ್ಟಡದ ಸಂರಕ್ಷಣಾ ಕಾಮಗಾರಿಗಾಗಿ. | 1432614 |
| 4 | ಶ್ರೀ ಭುವನೇಶ್ವರಿ ದೇವಸ್ಥಾನ, ಅರಮನೆ ಆವರಣ, ಮೈಸೂರು. | 1700000 |
| 5 | ಶ್ರೀ ಶ್ವೇತವರಹಸ್ವಾಮಿ ದೇವಸ್ಥಾನ, ಅರಮನೆ ಆವರಣ, ಮೈಸೂರು. (ಎರಡನೇ ಹಂತ) | 1125000 |
| 6 | ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು ಹುತ್ರಿದುರ್ಗಾ ಕೋಟೆಯ ಸಂರಕ್ಷಣಾ ಕಾಮಗಾರಿ | 2047243 |

| | | |
|---|---|---|
| 7 | ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು ಹುಲಿಯೂರು ದುರ್ಗದ ಕೋಟೆಯ ಸಂರಕ್ಷಣಾ ಕಾಮಗಾರಿ. | 1674397 |
| 8 | ರಾಮನಗರ ಜಿಲ್ಲೆ, ಮಾಗಡಿ ಪಟ್ಟಣದಲ್ಲಿರುವ ಕಲ್ಯಾಣಿ ಸಂರಕ್ಷಣಾ ಕಾಮಗಾರಿ. | 9483374 |
| 9 | ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು ಶಿರಾ ಪಟ್ಟಣದಲ್ಲಿರುವ ಶ್ರೀ ಕಸ್ತೂರಿ ರಂಗಪ್ಪನಾಯಕನ ಕೋಟೆಯ ಸುತ್ತ ಚೈನ್‌ಲಿಂಕ್ ಪೆನ್ಸಿಂಗ್ಸ್ ಕಂದಕದ ಅಭಿವೃದ್ಧಿ ನೂತನ ಸೇತುವೆ ನಿರ್ಮಾಣ, ಹೊರಭಾದಲ್ಲಿ ಗೇಟ್ ನಿಮಾಣ ಇನ್ನಿತರ ಅಭಿವೃದ್ಧಿ ಕಾಮಗಾರಿ. | 24875000 |
| 10 | ಮೈಸೂರು ಜಿಲ್ಲೆ, ಟಿ.ನರಸೀಪುರ ತಾಲ್ಲೂಕು, ಮೂಗೂರಿನ ಶ್ರೀ ತ್ರೀಪುರ ಸುಂದರಿ ದೇವಾಲಯದ ಬಳಿ ರಾಜಗೋಪುರ ನಿರ್ಮಾಣ ಹಾಗೂ ಇತರೆ ಸಂರಕ್ಷಣಾ ಕಾಮಗಾರಿ. | 9950000 |
| 11 | ಚಾಮರಾಜನಗರ ಜಿಲ್ಲೆ, ಕೊಳ್ಳೆಗಾಲ ಶಿವನಸಮುದ್ರದ ಬಳಿಯಿರುವ ವೇಸ್ಲಿ ಸೇತುವೆ ದುರಸ್ತಿ. | 1907343 |
| | **ಒಟ್ಟು ಮೊತ್ತ** | **6,20,54,051** |

## 8. ಆಯ-ವ್ಯಯ:

| ಕ್ರಮ ಸಂಖ್ಯೆ | ಯೋಜನಾ ಲೆಕ್ಕಶೀರ್ಷಿಕೆ | 2019–20ನೇ ಸಾಲಿಗೆ ನಿಗಧಿಪಡಿಸಿರುವ ಅನುದಾನ | 2019–20ನೇ ಸಾಲಿನಲ್ಲಿ 3ನೇ ತ್ರೈಮಾಸಿಕ ಅವಧಿಯ ಅಂತ್ಯಕ್ಕೆ ಬಿಡುಗಡೆಯಾಗಿರುವ ಅನುದಾನ | 2019–20ನೇ ಸಾಲಿನ ಡಿಸೆಂಬರ್–2019ರ ಅಂತ್ಯಕ್ಕೆ ಕೈಗೊಳ್ಳಲಾದ ವೆಚ್ಚ | ಶೇಕಡವಾರು ಬಿಡುಗಡೆಯಾಗಿರುವ ಅನುದಾನಕ್ಕೆ ಅನುಗುಣವಾಗಿ |
|---|---|---|---|---|---|
| 1 | 2205-00-102-0-79 ಚಾಲುಕ್ಯ ಪಾರಂಪರಿಕ ಪ್ರದೇಶ ನಿರ್ವಹಣಾ ಪ್ರಾಧಿಕಾರ | 50.00 | 37.50 | 37.50 | 100% |
| 2 | 2205-00-102-1-92 ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರ | 50.00 | 12.50 | 0.00 | 0% |
| 3 | 2205-00-103-0-01 ಪ್ರಾಚ್ಯವಸ್ತು ಸಂಗ್ರಹಾಲಯಗಳು | 878.00 | 658.50 | 405.99 | 62% |

| | | | | | |
|---|---|---|---|---|---|
| | ಮತ್ತು ಪರಂಪರೆ ಇಲಾಖೆ | | | | |
| 4 | 2205-00-103-0-18 ಹಂಪಿ ಅಭಿವೃದ್ಧಿ ಪ್ರಾಧಿಕಾರ | 30.00 | 22.50 | 15.00 | 67% |
| 5 | 2205-00-103-0-21 ಪರಂಪರೆ ಆಯುಕ್ತರು | 1009.00 | 756.75 | 397.19 | 52% |
| 6 | 2205-00-103-0-25 ಸಂಸ್ಕೃತಿ ಸಂಗ್ರಹಾಲಯ | 25.00 | 18.75 | 12.50 | 67% |
| 7 | 2205-00-107-0-01 ವಸ್ತುಸಂಗ್ರಹಾಲಯದ ಅಭಿವೃದ್ಧಿ | 274.00 | 205.50 | 146.12 | 71% |
| 8 | 2205-00-107-0-02 ಪ್ರಾಚೀನ ವಸ್ತುಗಳ ಮತ್ತು ಅಪೂರ್ವ ಕಲಾಕೃತಿಗಳ ಅಧಿನಿಯಮ (1972) | 3.00 | 0.75 | 0.00 | 0% |
| 9 | 4202-04-101-0-02 (ಬಂಡವಾಳ ವೆಚ್ಚ) ಪುರಾತತ್ವ ಮತ್ತು ವಸ್ತು ಸಂಗ್ರಹಾಲಯಗಳು | 300.00 | 125.00 | 11.41 | 9% |
| **ಒಟ್ಟು ಮೊತ್ತ** | | **2619.00** | **1837.75** | **1025.71** | **56%** |

## 9. ಮುಂದುವರೆದ ಯೋಜನಾ ಕಾರ್ಯಕ್ರಮ:

2019-20ನೇ ಸಾಲಿಗೆ ಯೋಜನೆ ಬಾಬ್ತಿನಡಿಯಲ್ಲಿ ರೂ.2619.00 ಲಕ್ಷ ಅನುದಾನವನ್ನು ಕಲ್ಪಿಸಲಾಗಿದ್ದು, ಇದಕ್ಕೆ ಸರ್ಕಾರದ ಆದೇಶದ ಸಂಖ್ಯೆ:ಟಿಓಆರ್ 12 ಟಿಡಿಎ 2019, ಬೆಂಗಳೂರು ದಿನಾಂಕ:06.07.2019ರಲ್ಲಿ ಕ್ರಿಯಾ ಯೋಜನೆಗೆ ಸರ್ಕಾರದ ಅನುಮೋದನೆ ದೊರೆತಿದೆ.

ಪ್ರಸಕ್ತ ಸಾಲಿನಲ್ಲಿ ಬಿಡುಗಡೆಯಾಗಿರುವ ಮೊತ್ತ ರೂ.1837.75ಲಕ್ಷಗಳಲ್ಲಿ ಡಿಸೆಂಬರ್-2019ರ ಮಾಹೆಯ ಅಂತ್ಯಕ್ಕೆ ರೂ.1025.71ಲಕ್ಷಗಳ ವೆಚ್ಚ ಮಾಡಲಾಗಿದ್ದು, ಶೇ.56% ರಷ್ಟು ಪ್ರಗತಿಯನ್ನು ಸಾಧಿಸಲಾಗಿದೆ.

## 10. ವಿಚಾರ ಸಂಕಿರಣಗಳು, ಪುರಾತತ್ವ ಛಾಯಾಚಿತ್ರ ವಸ್ತುಪ್ರದರ್ಶನಗಳು ಮತ್ತು ಸಮಾರಂಭಗಳು:

ಅ) ದಿನಾಂಕ:18.05.2019ರಂದು ಸಹಾಯಕ ನಿರ್ದೇಶಕರ ಕಛೇರಿ, ಬೆಂಗಳೂರು ಇಲ್ಲಿ ಅಂತರಾಷ್ಟ್ರೀಯ ವಸ್ತುಸಂಗ್ರಹಾಲಯದ ದಿನಾಚಾರಣೆಯ ಪ್ರಯುಕ್ತ ಏಳು ದಿನಗಳ ಪ್ರಯುಕ್ತ "ವಸ್ತುಸಂಗ್ರಹಾಲಯ ಸಪ್ತಾಹ" ವನ್ನು ಆಚರಿಸಲಾಯಿತು ಹಾಗೂ ನವೆಂಬರ್-2019ರ ಮಾಹೆಯಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿರುವ ನಾಣ್ಯಗಳ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ಆ) ಕ್ಯೂರೇಟರ್‌ರವರ ಕಛೇರಿ, ಗದಗ ಇಲ್ಲಿ ದಿನಾಂಕ:18.05.2019ರಂದು ವಸ್ತುಸಂಗ್ರಹಾಲಯ ದಿನಾಚಾರಣೆಯನ್ನು ಆಚರಿಸಲಾಯಿತು ಹಾಗೂ ದಿನಾಂಕ:20.11.2019 ರಿಂದ ದಿನಾಂಕ:22.11.2019ರವರೆಗೆ "ವಿಶ್ವಪರಂಪರಾ ಸಪ್ತಾಹ -2019" ರ ಅಂಗವಾಗಿ ಪ್ರಾಚೀನ ನಾಣ್ಯಗಳ ಕುರಿತು ವಿಶೇಷ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ಇ) ಉಪನಿರ್ದೇಶಕರ ಕಛೇರಿ, ಕಮಲಾಪುರ ಇಲ್ಲಿ ಹಂಪಿ ಉತ್ಸವ-2019ರ ಅಂಗವಾಗಿ ದಿನಾಂಕ:11.01.2020 ಮತ್ತು 12.01.2020ರಂದು 2 ದಿನಗಳ "ವಿಜಯನಗರ ಅಧ್ಯಯನ" ಕುರಿತ 24ನೇ ವಾರ್ಷಿಕ ವಿಚಾರಸಂಕೀರಣವನ್ನು ಏರ್ಪಡಿಸಲಾಗಿತ್ತು.

ಈ) ಕ್ಯೂರೇಟರ್ ರವರ ಕಛೇರಿ, ಹಾಸನ ಇಲ್ಲಿ ದಿನಾಂಕ:18.05.2019ರಂದು ಅಂತರಾಷ್ಟ್ರೀಯ ವಸ್ತುಸಂಗ್ರಹಾಲಯದ ದಿನಾಚರಣೆಯನ್ನು ಆಚರಿಸಲಾಯಿತು.

ಉ) ಕ್ಯೂರೇಟರ್ ರವರ ಕಛೇರಿ, ಮಂಗಳೂರು ಇಲ್ಲಿ ದಿನಾಂಕ:18.11.2019ರಿಂದ 25.11.2019ರವರೆಗೆ ವಿಶ್ವಪಾರಂಪರಿಕ ಸಪ್ತಾಹ ಕಾರ್ಯಕ್ರಮದಲ್ಲಿ ಮೈಸೂರು ದಸರಾ ಮತ್ತು ಪಾರಂಪರಿಕ ಕಟ್ಟಡಗಳ ವಿಶೇಷ ಛಾಯಚಿತ್ರ ಪ್ರದರ್ಶನವನ್ನು ಹಾಗೂ 23.11.2019ರಂದು ಒಂದು ದಿನದ ವಿಶೇಷ ನಾಣ್ಯಗಳ ಪ್ರದರ್ಶನ, ದಕ್ಷಿಣ ಕನ್ನಡ ಜಿಲ್ಲೆಯ ಅಂಚೆಚೀಟಿ ಹಾಗೂ ನಾಣ್ಯಗಳ ಸಂಗ್ರಹಕಾರರ ಸದಸ್ಯರಿಂದ ಏರ್ಪಡಿಸಲಾಗಿತ್ತು.

## 11. ಇಲಾಖಾ ವತಿಯಿಂದ 2019 ಮತ್ತು 2020 ನೇ ಸಾಲಿನಲ್ಲಿ ಹೊರ ತರಲಾದ ಪ್ರಕಟಣಾ ಪುಸ್ತಕಗಳು:

* ವಿಜಯನಗರ ಅಧ್ಯಯನ ಸಂಪುಟ-21

## 12. ಉತ್ಖನನ ಕಾರ್ಯದ ವರದಿ:

ಮೈಸೂರಿನ ಟಿ.ನರಸೀಪುರ ತಾಲ್ಲೂಕಿನ ತಲಕಾಡಿನಲ್ಲಿ 2018-19ನೇ ಸಾಲಿನಲ್ಲಿ ಪ್ರೊ.ಎಂ.ಎನ್.ಕೃಷ್ಣಮೂರ್ತಿ, ನಿವೃತ್ತ ಪ್ರಾಧ್ಯಾಪಕರು (ಪುರಾತತ್ವ ವಿಭಾಗ) ಮೈಸೂರು ವಿಶ್ವವಿದ್ಯಾಲಯ ಹಾಗೂ ಪ್ರಧಾನ ಸಲಹೆಗಾರರು ಮತ್ತು ಇಲಾಖಾ ನಿರ್ದೇಶಕರು (ಪುರಾತತ್ವ), ಇವರುಗಳ ಮಾರ್ಗದರ್ಶನದಲ್ಲಿ ತಲಕಾಡಿನಲ್ಲಿ ಉತ್ಖನನ ಕಾರ್ಯವನ್ನು ಕೈಗೊಂಡಿದ್ದು ಸದರಿ ಉತ್ಖನನ ಸ್ಥಳದಲ್ಲಿ ಪ್ರಮುಖ ಪ್ರಾಚ್ಯ ಅವಶೇಷಗಳು ದೊರೆತಿರುತ್ತವೆ.

### 13. ವಿಶ್ವ ಪರಂಪರೆ ದಿನಾಚರಣೆ

ದಿನಾಂಕ:18.04.2019ರಂದು ಕಛೇರಿ ಸಭಾಂಗಣದಲ್ಲಿ ವಿಶ್ವ ಪರಂಪರೆ ದಿನಾಚರಣೆಯನ್ನು ಸಾಂಕೇತಿಕವಾಗಿ ಆಚರಿಸಲಾಯಿತು. ಶ್ರೀ ಈಚನೂರು ಕುಮಾರ್, ಇತಿಹಾಸ ತಜ್ಞರು ಇವರು ಮೈಸೂರಿನ ರಾಜಮನೆತದ ಒಡೆಯರ್‌ರವರ ಕೊಡುಗೆ ಹಾಗೂ ಮೈಸೂರಿನ ಪಾರಂಪರಿಕ ಕಟ್ಟಡಗಳ ಮಹತ್ವ ಹಾಗೂ ಐತಿಹಾಸಿ ಹಿನ್ನೆಲೆಯ ಬಗ್ಗೆ ವಿವರಣೆ ನೀಡಿದರು.

□ ದಸರಾ ಮಹೋತ್ಸವ-2019ರ ಅಂಗವಾಗಿ ಆಯೋಜಿಸಲಾದ ಕಾರ್ಯಕ್ರಮಗಳು 1)ಪಾರಂಪರಿಕ ಉಡುಗೆಯಲ್ಲಿ ಪಾರಂಪರಿಕ ನಡಿಗೆ 2)ಪಾರಂಪರಿಕ ಕೇಶಾಂಲಕಾರ ಸ್ಪರ್ಧೆ 3)ಪಾರಂಪರಿಕ ಆಟಗಳ ಸ್ಪರ್ಧೆ 4)ಸೆಲ್ಫಿ ವಿತ್ ಹೆರಿಟೇಜ್ ಬಿಲ್ಡಿಂಗ್ 5)ಪಾರಂಪರಿಕ ದಸರಾ ಬೊಂಬೆ ಪ್ರದರ್ಶನ ಸ್ಪರ್ಧೆ.

ಮೈಸೂರು ದಸರಾ ಮಹೋತ್ಸವ 2019ರ ಅಂಗವಾಗಿ ಮೈಸೂರಿನಲ್ಲಿರುವ ಮೂರ್ತ ಪರಂಪರೆಯ ಪ್ರತೀಕಗಳಾದ, ಐತಿಹಾಸಿಕ ಕಲಾಕೌಶಲ್ಯದಿಂದ ಕೂಡಿದ ಪಾರಂಪರಿಕ ಕಟ್ಟಡಗಳ ಬಗ್ಗೆ ಮೈಸೂರಿನ ಪ್ರವಾಸಿಗರು, ಸಾರ್ವಜನಿಕರು ಹಾಗೂ ವಿವಿಧ ಕಾಲೇಜು ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ಸಲುವಾಗಿ ದಿನಾಂಕ:01.10.2019ರಂದು ಪಾರಂಪರಿಕ ಉಡುಗೆಯಲ್ಲಿ ಪಾರಂಪರಿಕ ನಡಿಗೆ; ದಿನಾಂಕ:02.10.2019ರಂದು ಪಾರಂಪರಿಕ ಕೇಶಾಲಂಕಾರ ಸ್ಪರ್ಧೆ; ದಿನಾಂಕ:03.10.2019ರಂದು ಪಾರಂಪರಿಕ ಆಟಗಳ ಸ್ಪರ್ಧೆ, ದಿನಾಂಕ:04.10.2019 ರಿಂದ ದಿನಾಂಕ:06.10.2019ರವರೆಗೆ ಪಾರಂಪರಿಕ ದಸರಾ ಬೊಂಬೆ ದರ್ಶನ ಸ್ಪರ್ಧೆ ಹಾಗೂ ಸೆಲ್ಫಿ ವಿತ್ ಹೆರಿಟೇಜ್ ಬಿಲ್ಡಿಂಗ್ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.

ಪ್ರಸಕ್ತ ಆರ್ಥಿಕ ಸಾಲಿನ ದಸರಾ ಮಹೋತ್ಸವವನ್ನು ಪಾರಂಪರಿಕ ಕೇಶಾಂಲಕಾರ ಸ್ಪರ್ಧೆ, ಪಾರಂಪರಿಕ ಆಟಗಳ ಸ್ಪರ್ಧೆ ಹಾಗೂ ಪಾರಂಪರಿಕ ದಸರಾ ಬೊಂಬೆ ದರ್ಶನ ಸ್ಪರ್ಧೆಗಳನ್ನು ಆಯೋಜಿಸುವ ಮೂಲಕ, ಇಂದಿನ ಯುವ ಜನತೆಗೆ ಪಾರಂಪರಿಕ ಆಟಗಳು ಹಾಗೂ ಕೇಶಾಲಂಕಾರವನ್ನು ಪರಿಚಯಿಸಲಾಯಿತು. ಹಾಗೂ ವಯಸ್ಕರಿಗೆ ಅವರ ಬಾಲ್ಯದ ನೆನಪುಗಳನ್ನು ಮೆಲುಕು ಹಾಕಲಾಯಿತು. ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ನಗದು ಬಹುಮಾನ ಮತ್ತು ನೆನಪಿನ ಕಾಣಿಕೆ ಹಾಗೂ ಭಾಗವಹಿಸಿದವರಿಗೆ ಪ್ರಮಾಣ ಪತ್ರ ನೀಡುವುದರ ಮೂಲಕ ಪ್ರೋತ್ಸಾಹಿಸಲಾಯಿತು.



**ಪಾರಂಪರಿಕ ಉಡುಗೆಯಲ್ಲಿ ಪಾರಂಪರಿಕ ನಡಿಗೆ** **ಪಾರಂಪರಿಕ ಕೇಶಾಂಲಕಾರ ಸ್ಪರ್ಧೆ**






**ಪಾರಂಪರಿಕ ಆಟಗಳ ಸ್ಪರ್ಧೆ**

**ಪಾರಂಪರಿಕ ದಸರಾ ಬೊಂಬೆ ದರ್ಶನ ಸ್ಪರ್ಧೆ**

**ಸೆಲ್ಫಿ ವಿತ್ ಹೆರಿಟೇಜ್ ಬಿಲ್ಡಿಂಗ್**







**14. ಮೈಸೂರು ಪಾರಂಪರಿಕ ಶೈಲಿಯ ಚಿತ್ರಕಲಾ ಶಿಬಿರ**

ಅಮೂರ್ತ ಪರಂಪರೆಗೆ ಸಂಬಂಧಿಸಿದಂತೆ ಮೈಸೂರು ಪಾರಂಪರಿಕ ಶೈಲಿಯ ಚಿತ್ರಕಲಾ ಶಿಬಿರವನ್ನು ಬೆಂಗಳೂರಿನ ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ ಆಯೋಜಿಸಲು ರೂ.10.00ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

**15. ಎನ್.ಎಸ್.ಎಸ್ ಘಟಕಗಳ ಮೂಲಕ ಸ್ಮಾರಕಗಳ ಸ್ವಚ್ಛತಾ ಕಾರ್ಯ**

ಕರ್ನಾಟಕದಲ್ಲಿರುವ ಪರಂಪರೆ ಕಟ್ಟಡಗಳು/ ದೇವಾಲಯಗಳು/ ಸ್ಮಾರಕಗಳನ್ನು ಸ್ವಚ್ಛಗೊಳಿಸುವ ಮೂಲಕ ಪರಂಪರೆಯನ್ನು ಮುಂದಿನ ಪೀಳಿಗೆಗೆ ಕಾಯ್ದಿರಿಸುವ ಉದ್ದೇಶದಿಂದ ಎನ್.ಎಸ್.ಎಸ್ ಘಟಕಗಳ ಮೂಲಕ, ಸ್ಮಾರಕಗಳ ಸ್ವಚ್ಛತಾ ಕಾರ್ಯಕ್ಕೆ **ರೂ.10.00ಲಕ್ಷಗಳ** ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

**16. ವಿಚಾರ ಸಂಕಿರಣ**

ರಾಜ್ಯದಲ್ಲಿರುವ ಪ್ರಾಚೀನ ಪಳೆಯುಳಿಕೆಗಳು/ ಸ್ಮಾರಕಗಳು/ ದೇವಾಲಯಗಳ ಕಲಾ ಶೈಲಿ, ವೈಭವತೆ, ವರ್ಣಚಿತ್ರ, ಚಿತ್ರಕಲಾ ಕೌಶಲ್ಯ ಮತ್ತು ಮೂರ್ತ, ಅಮೂರ್ತ ಮತ್ತು ನೈಸರ್ಗಿಕ ಪರಂಪರೆಯನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ಅನುಕೂಲವಾಗುವಂತೆ ವಿಚಾರ ಸಂಕಿರಣದಿಂದ ಸಂಶೋಧನಾತ್ಮಕ ವಿಚಾರ ವಿನಿಮಯವು ಪರಿಣಿತ ಸಂಶೋಧಕರು ಹಾಗೂ ವಿದ್ಯಾರ್ಥಿಗಳ ನಡುವೆ ಸಂಪರ್ಕ ಸೇತುವೆ ಕಲ್ಪಿಸಲು ಸಹಕಾರಿಯಾಗಿರುವುದರಿಂದ ರಾಜ್ಯ ಮಟ್ಟದ ವಿಚಾರ ಸಂಕಿರಣ ಆಯೋಜಿಸಲು **ರೂ.1.00ಲಕ್ಷಗಳ** ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

**17. ಪರಂಪರೆ ಕೂಟಗಳ ಸ್ಥಾಪನೆ ಮತ್ತು ಸ್ಪರ್ಧೆ**

ನಾಡಿನ ಮೂರ್ತ, ಅಮೂರ್ತ ಮತ್ತು ನೈಸರ್ಗಿಕ ಪರಂಪರೆಯ ವಿವಿಧ ಮಜಲುಗಳ ಬಗ್ಗೆ ಕಾಲೇಜು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಪರಂಪರೆ ಕೂಟಗಳ ಸ್ಥಾಪನೆ ಮತ್ತು ಸ್ಪರ್ಧೆಗೆ **ರೂ.10.00ಲಕ್ಷಗಳ** ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

## 18 ಪಾರಂಪರಿಕ ನಡಿಗೆ/ ಸೈಕ್ಲಿಂಗ್

ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಮೈಸೂರಿನ ಪಾರಂಪರಿಕ ಕಟ್ಟಡಗಳ ಹಿನ್ನೆಲೆ, ಪ್ರಾಮುಖ್ಯತೆ ಹಾಗೂ ವಾಸ್ತುಶಿಲ್ಪ ಶೈಲಿಯ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಆಡಳಿತ ತರಬೇತಿ ಸಂಸ್ಥೆ, ರಾಜ್ಯ ನಗರಾಭಿವೃದ್ಧಿ ಸಂಸ್ಥೆ, ಅಂಚೆ ತರಬೇತಿ ಸಂಸ್ಥೆ, ಮಹಾಜನ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮೀಪುರಂನ ರೋಟ್ರಾಕ್ಟ್ ಕ್ಲಬ್, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ ಹಾಗೂ ಎಸ್.ಬಿ.ಎಂ ಪೆನ್ನನರ್ ಕಮ್ಯೂನ್ ರಿಸೆಪ್ಷನ್ ಕಮಿಟಿ, ಮೈಸೂರು ಹಾಗೂ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ, ವಿದೇಶಿಗರಿಗೆ ಮತ್ತು ಪ್ರವಾಸಿಗರಿಗಾಗಿ ಪಾರಂಪರಿಕ ನಡಿಗೆಯನ್ನು ಇಲಾಖೆವತಿಯಿಂದ ಆಯೋಜಿಸಲಾಗಿದೆ.

- **ಒಟ್ಟು 20 ಪಾರಂಪರಿಕ ನಡಿಗೆಯನ್ನು ಆಯೋಜಿಸಲಾಗಿದೆ.**
- **ಪಾರಂಪರಿಕ ನಡಿಗೆಯಲ್ಲಿ 1189 ಆಸಕ್ತರು ಭಾಗವಹಿಸಿರುತ್ತಾರೆ.**

## 19. ಪ್ರಾಚ್ಯಪ್ರಜ್ಞೆ

ಕರ್ನಾಟಕವನ್ನಾಳಿದ ರಾಜ ಮನೆತನಗಳು ತಮ್ಮ ಆಡಳಿತಾವಧಿಯಲ್ಲಿ ಬಿಟ್ಟು ಹೋಗಿರುವ ಪಳೆಯುಳಿಕೆಗಳು/ ಸ್ಮಾರಕಗಳು/ ದೇವಸ್ಥಾನಗಳ, ಐತಿಹಾಸಿಕ ಹಿನ್ನೆಲೆ, ಕಲೆ, ಸಂಸ್ಕೃತಿ, ಸಾಹಿತ್ಯ, ವಾಸ್ತುಶಿಲ್ಪ ಹಾಗೂ ವಿಜ್ಞಾನದ ಬಗ್ಗೆ ಪ್ರೌಢಶಾಲೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಪ್ರಬಂಧ, ರಸಪ್ರಶ್ನೆ, ಭಾಷಣ ಹಾಗೂ ಚಿತ್ರಕಲೆ ಸ್ಪರ್ಧೆಗಳನ್ನು ಜಿಲ್ಲೆ ಹಾಗೂ ವಿಭಾಗ ಮಟ್ಟದಲ್ಲಿ ಆಯೋಜಿಸಲು **ರೂ.20.00ಲಕ್ಷಗಳ** ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

## 20. ವಿಶ್ವ ಪರಂಪರೆ ಸಪ್ತಾಹ

ಕರ್ನಾಟಕ ಸರ್ಕಾರವು ಗುರುತಿಸಿರುವ ಪಾರಂಪರಿಕ ಪ್ರದೇಶಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ವಿವಿಧ ಸ್ಥಳಗಳಲ್ಲಿ 2019 ನವೆಂಬರ್ 18 ರಿಂದ 25ನೇ ತಾರೀಖಿನವರೆಗೆ ವಿಶ್ವ ಪರಂಪರೆ ದಿನದ ಅಂಗವಾಗಿ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲು **ರೂ.10.00ಲಕ್ಷಗಳ** ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

## 21. ಪಾರಂಪರಿಕ ಕರಕುಶಲ ಕಲೆಗಳ ತರಬೇತಿ ಶಿಬಿರ

ಅಮೂರ್ತ ಪರಂಪರೆಗೆ ಸಂಬಂಧಿಸಿದಂತೆ ರಾಜ್ಯದಲ್ಲಿರುವ ನುರಿತ ಕರಕುಶಲ ಕರ್ಮಿಗಳನ್ನು ಗುರುತಿಸಿ ಅವರಿಂದ ಯುವ ಜನತೆಗೆ ಕರಕುಶಲ ತರಬೇತಿ ಶಿಬಿರವನ್ನು ಆಯೋಜಿಸಲು **ರೂ.10.00ಲಕ್ಷಗಳ** ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

**22.    ಮೇಲ್ಕಂಡ ಎಲ್ಲಾ ಕಾರ್ಯಕ್ರಮಗಳನ್ನು ರಾಜ್ಯಾದ್ಯಾಂತ ಹಮ್ಮಿಕೊಂಡಿರುವ ವಿವರ ಕೆಳಕಂಡಂತಿದೆ.**

**ಪ್ರಥಮ ಬಾರಿಗೆ ಇಲಾಖೆಯ ವಿವಿಧ ಅಧಿಕಾರಿಗಳಿಗೆ ಅನುದಾನ ಬಿಡುಗಡೆ ಮಾಡಿ, ರಾಜ್ಯಾದ್ಯಂತ ಪಾರಂಪರಿಕ ಚಟುವಟಿಕೆಗಳನ್ನು ಆಯೋಜಿಸಲಾಗಿದೆ.**

| ಕ್ರ. ಸಂ | ಕಾರ್ಯಕ್ರಮ | ಕಾರ್ಯಕ್ರಮ ಹಮ್ಮಿಕೊಂಡಿರುವ ವಿವರ | |
|---|---|---|---|
| | | ದಿನಾಂಕ | ಸ್ಥಳ |
| 1 | ಮೈಸೂರು ಪಾರಂಪರಿಕ ಶೈಲಿಯ ಚಿತ್ರಕಲಾ ಶಿಬಿರ | 21.11.2019 ರಿಂದ 30.11.2019 | ವೆಂಕಟಪ್ಪ ಚಿತ್ರ ಶಾಲೆ ಆವರಣ, ಬೆಂಗಳೂರು. |
| 2 | ಎನ್.ಎಸ್.ಎಸ್. ಸಹಯೋಗದೊಂದಿಗೆ ಪರಂಪರೆ ಕಟ್ಟಡಗಳ ಸ್ವಚ್ಛತೆ ಹಾಗೂ ~~ಸಂರಕ್ಷಣೆ - ಪ್ರಚಾರ~~ | 17.02.2020 | ಶ್ರೀ ಬಸವಣ್ಣ ದೇವಾಲಯ, ತಂಬೂರು |
| | | 18.02.2020 | ಕಾಮದೇನು ಕಲ್ಮೇಶ್ವರ ದೇವಾಲಯ, ಕಲಘಟಗಿ |
| | ಪರಂಪರೆ ಕುರಿತಂತೆ ಕಾಲೇಜುಗಳ ಸಹಯೋಗದೊಂದಿಗೆ ವಿಚಾರ ಸಂಕಿರಣ | 20.01.2020 | ಶ್ರೀ ಮೃತ್ಯಂಜಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಧಾರವಾಡ |
| | | 25.01.2020 | ಕೆ.ಆರ್.ಬೆಲ್ಲದ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ಮತ್ತು ಅರ್ಥಶಾಸ್ತ್ರ ಸ್ನಾತಕೋತ್ತರ ವಿಭಾಗ, ಮುಂಡರಗಿ, ಗದಗ |
| | | 05.02.2020 | ಬಸವೇಶ್ವರ ಕಲಾ ಮಹಾವಿದ್ಯಾಲಯ, ಬಾಗಲಕೋಟೆ |
| | | | ಮುಖ್ಯಸ್ಥರು, ಭಾರತೀಯ ಪ್ರಾಚೀನ ಇತಿಹಾಸ ಮತ್ತು ಶಾಸನಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ |
| | ಪರಂಪರೆ ಕೂಟಗಳ ಸ್ಥಾಪನೆ ಮತ್ತು ಸೇರ್ಪಡೆ | 03.02.2020 | ಜಿ.ಎಸ್.ಪಾಟೀಲ್ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಕುಂದಗೋಳ, ಧಾರವಾಡ ಜಿಲ್ಲೆ |
| | | 10.02.2020 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಲಘಟಗಿ, ಧಾರವಾಡ |
| | | | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜ್ಞಾನಧಾರ ಆವರಣ, ಕುಮಾರೇಶ್ವರ ನಗರ, ಧಾರವಾಡ. |

| | | | |
|---|---|---|---|
| | | | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಜನಗರ, ಹುಬ್ಬಳ್ಳಿ-580 032. |
| | ಪಾರಂಪರಿಕ ನಡಿಗೆ/ ಸೈಕ್ಲಿಂಗ್ ಕಾರ್ಯಕ್ರಮ | 23.10.2019 | ಕಿತ್ತೂರು, ಬೆಳಗಾವಿ ಜಿಲ್ಲೆ / |
| | | 18.11.2019 | ಧಾರವಾಡ ಜಿಲ್ಲೆ |
| | | 31.12.2019 | ಹಲಸಿ ಗ್ರಾಮ, ಖಾನಾಪೂರ ತಾ\|\|, ಬೆಳಗಾವಿ |
| | ಪ್ರಾಚ್ಯಪ್ರಜ್ಞೆ | 11.02.2020 | ಜಿಲ್ಲಾ ಮಟ್ಟದಲ್ಲಿ (09ಶೈಕ್ಷಣಿಕ ಜಿಲ್ಲೆಗಳಲ್ಲಿ) ಧಾರವಾಡ, ಹಾವೇರಿ, ಗದಗ, ಉತ್ತರ ಕನ್ನಡ, ಬೆಳಗಾವಿ, ಬಾಗಲಕೋಟೆ, ವಿಜಯಪುರ, ಚಿಕ್ಕೋಡಿ, ಶಿರಸಿ. |
| | | | ವಲಯ ಮಟ್ಟ : ಆಲೂರು ವೆಂಕಟರಾವ್ ಸಭಾ ಭವನ, ಧಾರವಾಡ |
| | ಪರಂಪರೆ ಸಪ್ತಾಹ (ರಾಜ್ಯ ಮಟ್ಟದ ಕಾರ್ಯಕ್ರಮಕ್ಕಾಗಿ) | ನವೆಂಬರ್ 18 ಮತ್ತು 19 | ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ |
| | ಪಾರಂಪರಿಕ ಕರಕುಶಲ ಕಲೆಗಳ ತರಬೇತಿ ಶಿಬಿರ | 03.02.2020 ರಿಂದ 09.02.2020 | ಶ್ರೀ ಅಕ್ಕಮಹಾದೇವಿ ಮಹಿಳಾ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಬೈಲಹೊಂಗಲ, ಬೆಳಗಾವಿ ಜಿಲ್ಲೆ |
| 3 | ಪರಂಪರೆ ಕುರಿತಂತೆ ಕಾಲೇಜುಗಳ ಸಹಯೋಗದೊಂದಿಗೆ ವಿಚಾರ ಸಂಕಿರಣ | 15.02.2020 ಮತ್ತು 16.02.2020 | ಇತಿಹಾಸ ವಿಭಾಗ, ಜೆ.ಎಸ್.ಎಸ್.ಮಹಿಳಾ ಕಾಲೇಜು (ಸ್ವಾಯತ್ತ), ಸರಸ್ವತಿ ಪುರಂ, ಮೈಸೂರು |
| | ಪರಂಪರೆ ಕೂಟಗಳ ಸ್ಥಾಪನೆ ಮತ್ತು ಸ್ಪರ್ಧೆ | 28.01.2020 ಮತ್ತು | ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು ಶೇಷಾದ್ರಿ ಅಯ್ಯರ್ ರಸ್ತೆ, ಮೈಸೂರು-570001. |
| | | 18.01.2020 | ಜೆ.ಎಸ್.ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು (ಸ್ವಾಯತ್ತ), ಊಟಿ ರಸ್ತೆ, ಮೈಸೂರು. |
| | ಪಾರಂಪರಿಕ ನಡಿಗೆ/ ಸೈಕ್ಲಿಂಗ್ ಕಾರ್ಯಕ್ರಮ | 2019 ಏಪ್ರಿಲ್ ನಿಂದ ಫೆಬ್ರುವರಿ | ಮೈಸೂರು ನಗರದ ಪಾರಂಪರಿಕ ಕಟ್ಟಡಗಳು |
| | Stylistic and Technical Authentication of Bronzes of Karnataka. | | |

| | | | |
|---|---|---|---|
| 4 | ಎನ್.ಎಸ್.ಎಸ್. ಸಹಯೋಗದೊಂದಿಗೆ ಪರಂಪರೆ ಕಟ್ಟಡಗಳ ಸ್ವಚ್ಛತೆ ಹಾಗೂ ಸಂರಕ್ಷಣೆ & ಪ್ರಚಾರ | | |
| | ಪರಂಪರೆ ಕುರಿತಂತೆ ಕಾಲೇಜುಗಳ ಸಹಯೋಗದೊಂದಿಗೆ ವಿಚಾರ ಸಂಕಿರಣ | | |
| | ಪರಂಪರೆ ಕೂಟಗಳ ಸ್ಥಾಪನೆ ಮತ್ತು ಸೇರ್ಪಡೆ | | |
| | ಪಾರಂಪರಿಕ ನಡಿಗೆ/ ಸೈಕ್ಲಿಂಗ್ ಕಾರ್ಯಕ್ರಮ | | |
| | ಪ್ರಾಚ್ಯಪ್ರಜ್ಞೆ | 15.02.2020 | |
| | ಪರಂಪರೆ ಸಪ್ತಾಹ | 18.11.2019 ರಿಂದ 25.11.2019 | ಸರ್ಕಾರಿ ವಸ್ತು ಸಂಗ್ರಹಾಲಯದ ಆವರಣ |
| 5 | ಎನ್.ಎಸ್.ಎಸ್. ಸಹಯೋಗದೊಂದಿಗೆ ಪರಂಪರೆ ಕಟ್ಟಡಗಳ ಸ್ವಚ್ಛತೆ ಹಾಗೂ ಸಂರಕ್ಷಣೆ & ಪ್ರಚಾರ | 27.01.2020 | ಸಂಕಲ್ಪ ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಾಲಯ, ಗಂಗಾವತಿ, ಇವರ ಎನ್.ಎಸ್.ಎಸ್. ಸಹಯೋಗದೊಂದಿಗೆ ಆನೆಗೊಂದಿಯ ಅಂಬಿಗರ ಬಾಗಿಲು, ಚಿಂತಾಮಣಿ ಮಠ ಹಾಗೂ ಹುಚ್ಚಪ್ಪಯ್ಯನ ಮಠ. |
| | | 27.02.2020 | ವಿಜಯನಗರ ಮಹಾವಿದ್ಯಾಲಯ, ಹೊಸಪೇಟೆ |
| | ಪರಂಪರೆ ಕೂಟಗಳ ಸ್ಥಾಪನೆ ಮತ್ತು ಸೇರ್ಪಡೆ | 5.2.2020 ಮತ್ತು 10.2.2020. | ಕೊಟ್ಟೂರೇಶ್ವರ ಪದವಿ ಮಹಾವಿದ್ಯಾಲಯ, ಕೊಟ್ಟೂರು, ಬಳ್ಳಾರಿ |
| | | 30.01.2020 ಮತ್ತು 7.2.2020. | ಸರಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪಳ |
| | | 28.01.2020 ಮತ್ತು 11.2.2020. | ಶ್ರೀ ಪಂಪಣ್ಣ ಶರಣಪ್ಪ ಗುಗ್ಗಳ ಶೆಟ್ರು ಸರಕಾರಿ ಪ್ರಥಮ ದರ್ಜೆ ಕಾಲೇಜು, ಕನಕಗಿರಿ ತಾ।।, ಕೊಪ್ಪಳ. |

| | | | |
|---|---|---|---|
| | | 25.1.2020 | ಶ್ರೀಮತಿ ಹೊನ್ನೂರಮ್ಮ ದಿ\|\|ಎಂ.ಸಿದ್ದಪ್ಪ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತೆಕ್ಕಲಕೋಟೆ-583122, ಸಿರಗುಪ್ಪ ತಾ\|\| ಬಳ್ಳಾರಿ. |
| | | 26.2.2020 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಂಡೂರು-583119, ಬಳ್ಳಾರಿ. |
| | | | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುರುಗೋಡು-583116, ಬಳ್ಳಾರಿ ಜಿಲ್ಲೆ |
| 6 | ಎನ್.ಎಸ್.ಎಸ್. ಸಹಯೋಗದೊಂದಿಗೆ ಪರಂಪರೆ ಕಟ್ಟಡಗಳ ಸ್ವಚ್ಛತೆ ಹಾಗೂ ಸಂರಕ್ಷಣೆ & ಪ್ರಚಾರ | | |
| | ಪರಂಪರೆ ಕೂಟಗಳ ಸ್ಥಾಪನೆ ಮತ್ತು ಸ್ಪರ್ಧೆ | | |
| | ಪಾರಂಪರಿಕ ನಡಿಗೆ/ ಸೈಕ್ಲಿಂಗ್ ಕಾರ್ಯಕ್ರಮ | | |
| | ಪ್ರಾಚ್ಯಪ್ರಜ್ಞೆ | | |
| | ಪರಂಪರೆ ಸಪ್ತಾಹ | 14.11.2019 | ಸರ್ಕಾರಿ ವಸ್ತು ಸಂಗ್ರಹಾಲಯಗಳು ಮತ್ತು ವೆಂಕಟಪ್ಪ ಚಿತ್ರಶಾಲೆ, ಬೆಂಗಳೂರು |
| 7 | ಎನ್.ಎಸ್.ಎಸ್. ಸಹಯೋಗದೊಂದಿಗೆ ಪರಂಪರೆ ಕಟ್ಟಡಗಳ ಸ್ವಚ್ಛತೆ ಹಾಗೂ ಸಂರಕ್ಷಣೆ & ಪ್ರಚಾರ | 17.01.2020 | ಕೊರಟಗೆರೆ ಗ್ರಾಮದ ಹಂಪಯ್ಯನ ಮಠ ಮತು ಲಕ್ಷ್ಮೀನರಸಿಂಹ ದೇವಸ್ಥಾನ |
| | | 20.01.2020 | ರಂಗಯ್ಯನ ಬಾಗಿಲು ಮತ್ತು ಹುಚ್ಚಂಗಿ ಯಲ್ಲಮ್ಮ ದೇವಸ್ಥಾನ |
| | | 27.01.2020 | ತಮಟಕಲ್ಲು, ವೀರಗಲ್ಲು, ಚಿತ್ರದುರ್ಗ |
| | | 28.02.2020 | ಹೊರಕೆರೆ ದೇವರಪುರ ಗ್ರಾಮದ ಲಕ್ಷ್ಮೀನರಸಿಂಹ ದೇವಸ್ಥಾನ ಮತ್ತು ಪುಷ್ಕರಣಿ |
| | | 29.02.2020 | ಈಶ್ವರ ದೇವಸ್ಥಾನ ಮತ್ತು ವೀರಾಂಜನೇಯ ದೇವಸ್ಥಾನ |
| | ಪರಂಪರೆ ಕೂಟಗಳ ಸ್ಥಾಪನೆ ಮತ್ತು ಸ್ಪರ್ಧೆ | 09.02.2020 | ನೆಹರು ಯುವಕ ಕೇಂದ್ರ ಚಿತ್ರದುರ್ಗ |

| | | | |
|---|---|---|---|
| 8 | ಎನ್.ಎಸ್.ಎಸ್. ಸಹಯೋಗದೊಂದಿಗೆ ಪರಂಪರೆ ಕಟ್ಟಡಗಳ ಸ್ವಚ್ಛತೆ ಹಾಗೂ ಸಂರಕ್ಷಣೆ & ಪ್ರಚಾರ | 10.01.2020 | ಇಲಾಖೆಯ ಸ್ಮಾರಕಗಳಾದ ಶಿವಪ್ಪನಾಯಕ ಅರಮನೆ, ಕೋಟೆ ಆಂಜನೇಯಸ್ವಾಮಿ ದೇವಾಲಯ, ಭೀಮೇಶ್ವರ ದೇವಾಲಯ |
| | | 19.01.2020 | ಸಾಗರ |
| | | 03.02.2020 | ಶಿಕಾರಿಪುರ |
| | ಪರಂಪರೆ ಕುರಿತಂತೆ ಕಾಲೇಜುಗಳ ಸಹಯೋಗದೊಂದಿಗೆ ವಿಚಾರ ಸಂಕಿರಣ | 17.01.2020 | ಅಜ್ಜಂಪುರ |
| | | 22.01.2020 ಮತ್ತು 23.01.2020 | ಹೊನ್ನಾವರ |
| | ಪರಂಪರೆ ಕೂಟಗಳ ಸ್ಥಾಪನೆ ಮತ್ತು ಸೇರ್ಪಡೆ | | |
| | ಪಾರಂಪರಿಕ ನಡಿಗೆ/ ಸೈಕ್ಲಿಂಗ್ ಕಾರ್ಯಕ್ರಮ | 19.01.2020 . | ಸಾಗರ |
| | | 03.02.2020 | ಶಿಕಾರಿಪುರ |
| | ಪರಂಪರೆ ಸಪ್ತಾಹ | 21.11.2019 | ಶಿವಪ್ಪ ನಾಯಕ ಅರಮನೆ, ಶಿವಮೊಗ್ಗ |
| 9 | ಎನ್.ಎಸ್.ಎಸ್. ಸಹಯೋಗದೊಂದಿಗೆ ಪರಂಪರೆ ಕಟ್ಟಡಗಳ ಸ್ವಚ್ಛತೆ ಹಾಗೂ ಸಂರಕ್ಷಣೆ & ಪ್ರಚಾರ | 25.01.2020 | ವಿಜಯಪುರದ ಶ್ರೀ ಅರ್ಕೇಶ್ವರ ದೇವಾಲಯ, ಮುಡುಕು ತೊರೆಯ ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಾಲಯ, ತಲಕಾಡಿನ ಗ್ರಾಮದಲ್ಲಿರುವ ಶ್ರೀ ವೀರಭದ್ರೇಶ್ವರ ದೇವಾಲಯ, ತಲಕಾಡಿನ ಗ್ರಾಮದಲ್ಲಿರುವ ಶ್ರೀ ವೈದ್ಯೇಶ್ವರಸ್ವಾಮಿ ದೇವಾಲಯ, ತಲಕಾಡಿನ ಗ್ರಾಮದಲ್ಲಿರುವ ಶ್ರೀ ಕೀರ್ತಿನಾರಾಯಣ ದೇವಾಲಯ. |

| | | | |
|---|---|---|---|
| | | 26.01.2020 | ಗರ್ಗೇಶ್ವರಿ ಗ್ರಾಮದಲ್ಲಿರುವ ಶ್ರೀ ಗರ್ಗೇಶ್ವರ ದೇವಾಲಯ, ತಿ.ನರಸೀಪುರ, ಹಳೇ ತಿರುಮಲಕೂಡಲುವಿನ ಶ್ರೀ ಅಗಸ್ತ್ಯೇಶ್ವರ ದೇವಾಲಯ, ತಿ.ನರಸೀಪುರ, ಶ್ರೀ ಅಗಸ್ತ್ಯೇಶ್ವರ ದೇವಾಲಯದ ಮುಂದಿನ ನದಿಯ ಸ್ನಾನಘಟ್ಟ, ತಿ.ನರಸೀಪುರ, ಹಳೇ ತಿರುಮಲಕೂಡಲುವಿನ ಶ್ರೀ ವ್ಯಾಸರಾಜ ಮಠದ ಆವರಣ, ತಿ.ನರಸೀಪುರ<br>ಶ್ರೀ ಮೂಲಸ್ಥಾನೇಸ್ವರ ಹಾಗೂ ಶಿವಗಾಮಸುಂದರಿ ದೇವಾಯದ ಆವರಣ, ತಿ.ನರಸೀಪುರ, ಜೈನ ಬಸದಿಯ ಆವರಣ, ತಿ.ನರಸೀಪುರ |
| | | 01.02.2020 | ಶ್ರೀ ತ್ರಿಪುರಸುಂದರಮ್ಮಣ್ಣಿ ದೇವಾಲಯ, ಮೂಗೂರು ಶ್ರೀ ದೇಶೇಶ್ವರ ಸ್ವಾಮಿ ದೇವಾಲಯ, ಮೂಗೂರು, ಶ್ರೀ ನಾರಾಯಣಸ್ವಾಮಿ ದೇವಾಲಯ, ಮೂಗೂರು |
| | | 02.02.2020 | ಶ್ರೀ ಕೇಶವ ದೇವಾಲಯದ ಆವರಣ, ಸೋಮನಾಥಪುರ |
| | ಪ್ರಾಚ್ಯಪ್ರಜ್ಞೆ | 27.01.2020 | ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು |
| | ಪರಂಪರೆ ಸಪ್ತಾಹ | 25.11.2020 | ಮೈಸೂರಿನ ಪಾರಂಪರಿಕ ಕಟ್ಟಡಗಳನ್ನು ನಡಿಗೆ ಮೂಲಕ ಪರಿಚಯ |
| | ಪರಂಪರೆ ಕೂಟಗಳ ಸ್ಥಾಪನೆ ಮತ್ತು ಸೇರ್ಪಡೆ | 01.10.2019 ಮತ್ತು 02.10.2020 | ಪಿಆರ್‌ಎಂ ವಿಜಯ ಪ್ರಥಮ ದರ್ಜೆ ಕಾಲೇಜು, ತಿ.ನರಸೀಪುರ ತಾ\|\|, ಮೈಸೂರು. |
| | | 27.02.2020 | ಜೆ.ಎಸ್.ಎಸ್ ಪ್ರಥಮ ದರ್ಜೆ ಕಾಲೇಜು, ನಂಜನಗೂಡು ತಾ\|\| ಮೈಸೂರು. |
| 10 | ಎನ್.ಎಸ್.ಎಸ್. ಸಹಯೋಗದೊಂದಿಗೆ ಪರಂಪರೆ ಕಟ್ಟಡಗಳ ಸ್ವಚ್ಛತೆ ಹಾಗೂ ಸಂರಕ್ಷಣೆ & ಪ್ರಚಾರ | **ಕಾರ್ಯಕ್ರಮ ನಡೆದಿರುವುದಿಲ್ಲ.** | |
| 11 | ಎನ್.ಎಸ್.ಎಸ್. ಸಹಯೋಗದೊಂದಿಗೆ ಪರಂಪರೆ | 01.02.2020 , 02.02.2020 | ನರೇಗಲ್, ಶಿರಹಟ್ಟಿ ಮತ್ತು ಗದಗ-ಬೆಟಗೇರಿ, ಗದಗ. |

| | | | |
|---|---|---|---|
| | ಕಟ್ಟಡಗಳ ಸ್ವಚ್ಛತೆ ಹಾಗೂ ಸಂರಕ್ಷಣೆ & ಪ್ರಚಾರ | 03.02.2020 , 25.02.2020 , 28.02.2020 & 29.02.2020 | |
| | ಪರಂಪರೆ ಸಪ್ತಾಹ | 20.11.2019 ರಿಂದ 22.11.2019 | ಸರ್ಕಾರಿ ವಸ್ತು ಸಂಗ್ರಹಾಲಯ, ಗದಗ |
| | ಪರಂಪರೆ ಕೂಟಗಳ ಸ್ಥಾಪನೆ ಮತ್ತು ಸೇರ್ಪಡೆ | | |
| 12 | ಎನ್.ಎಸ್.ಎಸ್. ಸಹಯೋಗದೊಂದಿಗೆ ಪರಂಪರೆ ಕಟ್ಟಡಗಳ ಸ್ವಚ್ಛತೆ ಹಾಗೂ ಸಂರಕ್ಷಣೆ & ಪ್ರಚಾರ | | |
| | ಪರಂಪರೆ ಕುರಿತಂತೆ ಕಾಲೇಜುಗಳ ಸಹಯೋಗದೊಂದಿಗೆ ವಿಚಾರ ಸಂಕಿರಣ | | |
| | ಪರಂಪರೆ ಸಪ್ತಾಹ | 22.11.2019 | ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು, ಹಾಸನ |
| | ಪರಂಪರೆ ಕೂಟಗಳ ಸ್ಥಾಪನೆ ಮತ್ತು ಸೇರ್ಪಡೆ | | ಅರಕಲಗೂಡು ವರದರಾಜಲು ಕಾಂತಮ್ಮ (ಎ.ವಿ.ಕಾಂತಮ್ಮ) ಮಹಿಳಾ ಕಾಲೇಜು, ಹಾಸನ-57320. |
| | | | ಎನ್.ಡಿ.ಆರ್.ಕೆ ಪ್ರಥಮ ದರ್ಜೆ ಕಾಲೇಜು, ಹಾಸನ. |
| | | 04.10.2019 | ಸರ್ಕಾರಿ ಪ್ರಥಮ ದರ್ಜೆ ಕಾಲೇಜ, ಹಳೇಬೀಡು-573121, ಹಾಸನ. |
| | | | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅರಕಲಗೂಡು-573102, ಹಾಸನ |
| | | | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅರಸೀಕೆರೆ-573103, ಹಾಸನ. |
| 13 | ಎನ್.ಎಸ್.ಎಸ್. ಸಹಯೋಗದೊಂದಿಗೆ ಪರಂಪರೆ | | |

| | | | |
|---|---|---|---|
| | ಕಟ್ಟಡಗಳ ಸ್ವಚ್ಛತೆ ಹಾಗೂ ಸಂರಕ್ಷಣೆ & ಪ್ರಚಾರ | | |
| 14 | ಎನ್.ಎಸ್.ಎಸ್. ಸಹಯೋಗದೊಂದಿಗೆ ಪರಂಪರೆ ಕಟ್ಟಡಗಳ ಸ್ವಚ್ಛತೆ ಹಾಗೂ ಸಂರಕ್ಷಣೆ & ಪ್ರಚಾರ | 14.12.2019 ಮತ್ತು 15.02.2019 | ನಾಲ್ಕುನಾಡು ಅರಮನೆಯ ಸಮೀಪ |
| | ಪರಂಪರೆ ಸಪ್ತಾಹ | 22.11.2019 ರಿಂದ 24.11.2019 | ಕೋಟೆ ಆವರಣದಲ್ಲಿರುವ ಅರಮನೆ ಕೊಠಡಿ |
| | ಪರಂಪರೆ ಕೂಟಗಳ ಸ್ಥಾಪನೆ ಮತ್ತು ಸೇರ್ಪಡೆ | 13.12.2019 | ಸರ್ಕಾರಿ ಪದವಿ ಪೂರ್ವ ಕಾಲೇಜು, ವೀರಾಜಪೇಟೆ |
| 15 | ಎನ್.ಎಸ್.ಎಸ್. ಸಹಯೋಗದೊಂದಿಗೆ ಪರಂಪರೆ ಕಟ್ಟಡಗಳ ಸ್ವಚ್ಛತೆ ಹಾಗೂ ಸಂರಕ್ಷಣೆ & ಪ್ರಚಾರ | 18.01.2020 ಮತ್ತು 19.01.2020 | ಸಾವಿರ ಕಂಬದ ಬಸದಿ, ಬಡಗ ಬಸದಿ, ಕೋಟೆ ವಿಕ್ರಮ ಶೆಟ್ಟಿ ಬಸದಿ, ಕೋಟೆ ಚೋಳ ಶೆಟ್ಟಿ ಬಸದಿ, ಮಹಾದೇವ ಶೆಟ್ಟಿ ಬಸದಿ, ಗುರು ಬಸದಿ |
| | | 25.01.2020 | ಮಂಗಳೂರಿನ ಸೋಮೇಶ್ವರ, ಶ್ರೀ ಸೋಮನಾಥೇಶ್ವರ ದೇವಸ್ಥಾನ, ಜ್ಞಾನೋದಯ ಸಮಾಜ ಮಂದಿರ, ಹೊಯ್ಗಬಜಾರ್, ಕದ್ರಿ ಜೋಗಿ ಮಠ, ಮಂಗಳೂರು ವಸ್ತು ಸಂಗ್ರಹಾಲಯ ಬಿಜೈ, |
| | ಪರಂಪರೆ ಸಪ್ತಾಹ | 18.11.2019 ರಿಂದ 25.11.2020 ಹಾಗೂ 23.11.2019 | ಶ್ರೀ ಮಂಜುನಾಥೇಶ್ವರ ದೇವಸ್ಥಾನ, ಮಂಗಳೂರು |
| | ಪರಂಪರೆ ಕೂಟಗಳ ಸ್ಥಾಪನೆ ಮತ್ತು ಸೇರ್ಪಡೆ | 04.02.2020 | ಶ್ರೀ ಧವಳ ಕಾಲೇಜು, ಮೂಡಬಿದರೆ, ಮಂಗಳೂರು |
| 16 | ಎನ್.ಎಸ್.ಎಸ್. ಸಹಯೋಗದೊಂದಿಗೆ ಪರಂಪರೆ ಕಟ್ಟಡಗಳ ಸ್ವಚ್ಛತೆ ಹಾಗೂ ಸಂರಕ್ಷಣೆ & ಪ್ರಚಾರ | 24.01.2020 ಮತ್ತು 25.01.2020 | ರಾಯಚೂರು ನಗರದ ಸರ್ಕಾರಿ ವಸ್ತು ಸಂಗ್ರಹಾಲಯ, ಐತಿಹಾಸಿಕ ಸ್ಮಾರಕಗಳು, ರಾಯಚೂರು ಕೋಟೆ ಹಾಗೂ ಮಲಿಯಾಬಾದ್ ಕೋಟೆ ಆವರಣ |
| 17 | ಎನ್.ಎಸ್.ಎಸ್. ಸಹಯೋಗದೊಂದಿಗೆ ಪರಂಪರೆ ಕಟ್ಟಡಗಳ ಸ್ವಚ್ಛತೆ ಹಾಗೂ ಸಂರಕ್ಷಣೆ & ಪ್ರಚಾರ | | |

| | | | |
|---|---|---|---|
| | ಪರಂಪರೆ ಸಪ್ತಾಹ | | |
| | ಪರಂಪರೆ ಕೂಟಗಳ ಸ್ಥಾಪನೆ ಮತ್ತು ಸ್ಪರ್ಧೆ | | |
| 18 | ಎನ್.ಎಸ್.ಎಸ್. ಸಹಯೋಗದೊಂದಿಗೆ ಪರಂಪರೆ ಕಟ್ಟಡಗಳ ಸ್ವಚ್ಛತೆ ಹಾಗೂ ಸಂರಕ್ಷಣೆ & ಪ್ರಚಾರ | 05.01.2020 | ಕಲ್ಲೂರ ನಾಗನಹಳ್ಳಿ ಗ್ರಾಮದಲ್ಲಿನ ಮಸ್ತಮ್ಮ ಗುಡಿಗಳು |
| | | 18.01.2020 | ಶ್ರೀ ಮಹಾಲಿಂಗೇಶ್ವರ ದೇವಾಲಯ, ಮೈಸೂರು |
| | | 25.01.2020 | ಶ್ರೀ ವೆಂಕಟರಮಣ ದೇವಾಲಯ, ಜಯಪುರ |
| | | 29.01.2020 | ಶ್ರೀ ಮಹಾಲಿಂಗೇಶ್ವರ ದೇವಾಲಯ, ಜಯಪುರ |
| | | 31.01.2020 | ಕೋಣಪ್ಪನ ದೇವಾಲಯ, ಬರಡನಪುರ ಗ್ರಾಮ |
| | | 02.02.2020 | ಜೇಡಿ ಕಟ್ಟೆ ಮಹಾದೇಶ್ವರ ದೇವಾಲಯ, ಜಯಪುರ |
| | | 01.02.2020 | ಗುಜ್ಜಾರಮ್ಮ ದೇವಾಲಯ |
| | | 18.01.2020 | ಶ್ರೀ ವೀರಭದ್ರೇಶ್ವರ ದೇವಾಲಯ, ಚಾಮರಾಜನಗರ |
| | | 01.02.2020 | ಹರಳುಕೋಟೆ, ಶ್ರೀ ಆಂಜನೇಯ ಸ್ವಾಮಿ ದೇವಾಲಯ, ಚಾಮರಾಜನಗರ |
| | | 03.02.2020 | ಹರಳುಕೋಟೆ ಜನಾರ್ಧನಸ್ವಾಮಿ ದೇವಾಲಯ |
| | ಪರಂಪರೆ ಕೂಟಗಳ ಸ್ಥಾಪನೆ ಮತ್ತು ಸ್ಪರ್ಧೆ | 22.01.2020 ಮತ್ತು 28.01.2020 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸರಗೂರು, ಹೆಚ್.ಡಿ.ಕೋಟೆ ತಾ\|\| |
| | | 29.01.2020 ಮತ್ತು 31.01.2020 | ಜೆ.ಎಸ್.ಎಸ್ ಮಹಿಳಾ ಕಾಲೇಜು, ಚಾಮರಾಜನಗರ |
| | ಎನ್.ಎಸ್.ಎಸ್. ಸಹಯೋಗದೊಂದಿಗೆ ಪರಂಪರೆ | 22.01.2020 , | ಈಶ್ವರ ಗುಡಿ, ಜೋಡುಗುಡಿ, |
| | | 29.01.2020 | ಕಿತ್ತೂರು ದೇಸಾಯಿ ಅರಸರ ಸಮಾಧಿಗಳು |

| | | |
|---|---|---|
| ಕಟ್ಟಡಗಳ ಸ್ವಚ್ಛತೆ ಹಾಗೂ ಸಂರಕ್ಷಣೆ & ಪ್ರಚಾರ | 30.01.2020 | ಕಿತ್ತೂರು ಅರಮನೆ ಹಾಗೂ ಅವರಾದಿಯ ರಾಮಲಿಂಗೇಶ್ವರ ಗುಡಿ |
| ಪರಂಪರೆ ಸಪ್ತಾಹ | 23.11.2019 ಮತ್ತು 24.11.2019 | ಸರ್ಕಾರಿ ವಸ್ತು ಸಂಗ್ರಹಾಲಯ, ಕಿತ್ತೂರು |
| ಪರಂಪರೆ ಕೂಟಗಳ ಸ್ಥಾಪನೆ ಮತ್ತು ಸೇರ್ಪಡೆ | 01.02.2020, 04.02.2020 ಮತ್ತು 07.02.2020 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನೇಸರಗಿ, |
| | 04.02.2020, 05.02.2020 ಮತ್ತು 09.02.2020 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಕಟನೂರ, |
| | 17.02.2020, 18.02.2020 ಮತ್ತು 19.02.2020 | ಅಂಜುಮಾನ್ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ಬೆಳಗಾವಿ |
| | | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಖಾನಾಪುರ |

## 23.ಪಾರಂಪರಿಕ ಸಮಿತಿಗಳು;

| ಕ್ರ,ಸಂ. | ಸಮಿತಿಗಳು | ಸಮಿತಿ ರಚನೆ ವಿವರ |
|---|---|---|
| 1 | ಮೈಸೂರು ಪಾರಂಪರಿಕ ಪ್ರದೇಶ ಅಭಿವೃದ್ಧಿ ಮತ್ತು ಸಂರಕ್ಷಣಾ ತಜ್ಞರ ಸಮಿತಿ. | ಆಗಿದೆ |
| 2 | ಶ್ರೀರಂಗಪಟ್ಟಣ ಪಾರಂಪರಿಕ ಪ್ರದೇಶ ಅಭಿವೃದ್ಧಿ ಮತ್ತು ಸಂರಕ್ಷಣಾ ತಜ್ಞರ ಸಮಿತಿ. | ಆಗಿದೆ |
| 3 | ಗುಲ್ಬರ್ಗಾ ಪಾರಂಪರಿಕ ಪ್ರದೇಶ ಅಭಿವೃದ್ಧಿ ಮತ್ತು ಸಂರಕ್ಷಣಾ ತಜ್ಞರ ಸಮಿತಿ. | ಆಗಿದೆ |
| 4 | ಬೀದರ್ ಪಾರಂಪರಿಕ ಪ್ರದೇಶ ಅಭಿವೃದ್ಧಿ ಮತ್ತು ಸಂರಕ್ಷಣಾ ತಜ್ಞರ ಸಮಿತಿ. | ಆಗಿದೆ |
| 5 | ಕಿತ್ತೂರು ಪಾರಂಪರಿಕ ಪ್ರದೇಶ ಅಭಿವೃದ್ಧಿ ಮತ್ತು ಸಂರಕ್ಷಣಾ ತಜ್ಞರ ಸಮಿತಿ. | ಆಗಿದೆ |

| | | |
|---|---|---|
| 6 | ಬಿಜಾಪುರ ಪಾರಂಪರಿಕ ಪ್ರದೇಶ ಅಭಿವೃದ್ಧಿ ಮತ್ತು ಸಂರಕ್ಷಣಾ ತಜ್ಞರ ಸಮಿತಿ. | ಆಗಿದೆ |
| 7 | ಬೆಂಗಳೂರು ನಗರ ಪಾರಂಪರಿಕ ಪ್ರದೇಶ ಅಭಿವೃದ್ಧಿ ಮತ್ತು ಸಂರಕ್ಷಣಾ ತಜ್ಞರ ಸಮಿತಿ. | ಆಗಿದೆ |
| 8 | ಬಳ್ಳಿಗಾವಿ ನಗರ ಪಾರಂಪರಿಕ ಪ್ರದೇಶ ಅಭಿವೃದ್ಧಿ ಮತ್ತು ಸಂರಕ್ಷಣಾ ತಜ್ಞರ ಸಮಿತಿ. | ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ |

## 24. ವಿಚಾರ ಸಂಕಿರಣ:

ಪುರಾತತ್ವ ಸಹಾಯಕರು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಕಮಲಾಪುರ ಇವರು ವಿಚಾರಸಂಕೀರಣದಲ್ಲಿ ಮಂಡಿಸಿದ ಪ್ರಬಂಧಗಳು

- ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು ಇವರು ಇಲಾಖೆಯ ಸಹಯೋಗದೊಂದಿಗೆ ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕು ಹುಂಚದಲ್ಲಿ ಜರುಗಿದ 32ನೇ ವಾರ್ಷಿಕ ಸಮ್ಮೇಳನದಲ್ಲಿ ಭಾಗವಹಿಸಿ ದಿನಾಂಕ:18.10.2019ರಂದು "ಹಿರೇಮಳಲಿ ಗ್ರಾಮದಲ್ಲಿರುವ ಪ್ರಾಚ್ಯಾವಶೇಷಗಳು" ಎನ್ನುವ ವಿಷಯದ ಬಗ್ಗೆ ಪ್ರಬಂಧ ಮಂಡಿಸಿರುತ್ತಾರೆ.
- ಹಂಪಿ ಉತ್ಸವ-2019ರ ಅಂಗವಾಗಿ ದಿನಾಂಕ:11.01.2020 ಮತ್ತು 12.01.2020ರಂದು ಜರುಗಿದ 2 ದಿವಸಗಳ ವಿಜಯನಗರ ಅಧ್ಯಾಯನ ಕುರಿತ 24ನೇ ವಾರ್ಷಿಕ ವಿಚಾರಸಂಕೀರಣದಲ್ಲಿ "ಆನೆಗೊಂದಿ ಕೋಟೆ ಸಂರಕ್ಷಣೆಯಲ್ಲಿ ದೊರೆತ ಪ್ರಾಚ್ಯಾವಶೇಷಗಳು" ಎನ್ನುವ ವಿಷಯದ ಬಗ್ಗೆ ಪ್ರಬಂಧ ಮಂಡಿಸಿರುತ್ತಾರೆ.
- ಇಲಾಖೆಯ ಸಹಯೋಗದೊಂದಿಗೆ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಾಸನ ಇಲ್ಲಿ ಜರುಗಿದ ಪರಂಪರೆ ಕುರಿತು ವಿಚಾರಸಂಕೀರಣದಲ್ಲಿ ದಿನಾಂಕ;18.02.2020ರಂದು ಭಾಗವಹಿಸಿ "ಪರಂಪರೆ ಸಂರಕ್ಷಣೆಯಲ್ಲಿ ವಸ್ತುಸಂಗ್ರಹಾಲಯಗಳ ಪಾತ್ರ" ಎನ್ನುವ ವಿಷಯದ ಬಗ್ಗೆ ಪ್ರಬಂಧ ಮಂಡಿಸಿರುತ್ತಾರೆ.

## 25. ಮಾಹಿತಿ ಹಕ್ಕು ಅಧಿನಿಯಮ:

2019-20

### ~~2018-19~~ನೇ ಸಾಲಿನಲ್ಲಿ ಮಾಹಿತಿ ಹಕ್ಕು ಅಧಿನಿಯಮದಡಿ ಸ್ವೀಕೃತವಾದ ಅರ್ಜಿಗಳ ವಿವರ

| ವರ್ಷ | ನೇರವಾಗಿ ಸ್ವೀಕೃತವಾದ ಅರ್ಜಿಗಳು | ಸರ್ಕಾರದಿಂದ ವರ್ಗಾಹಿಸಿರುವ ಅರ್ಜಿಗಳು | ಅಧೀನ ಕಛೇರಿಯಿಂದ ವರ್ಗಾಹಿಸಿದ ಅರ್ಜಿಗಳು | ಅಧೀನ ಕಛೇರಿಯಲ್ಲಿ ನೇರವಾಗಿ ಮಾಹಿತಿ ನೀಡಿರುವ ಪತ್ರದ ಪ್ರತಿಗಳು | ಒಟ್ಟು ಸ್ವೀಕೃತವಾದ ಅರ್ಜಿಗಳು |
|---|---|---|---|---|---|
| ಏಪ್ರಿಲ್ 2019 ರಿಂದ ಫೆಬ್ರವರಿ 2020 | 107 | 4 | 20 | 2 | **107** |

## 26 ಖಾಸಗೀ ಸಹಭಾಗಿತ್ವದ ಯೋಜನೆ:

ದಿನಾಂಕ:04.09.2019ರಂದು ಸರ್ಕಾರದ ಕಾರ್ಯದರ್ಶಿಗಳು, ಪ್ರವಾಸೋದ್ಯಮ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್, ಇವರ ಸಹಭಾಗಿತ್ವದಲ್ಲಿ 2019-20ನೇ ಸಾಲಿನ ಐತಿಹಾಸಿಕ ಸ್ಮಾರಕಗಳ ಸಂರಕ್ಷಣಾ ಕಾರ್ಯಕ್ರಮದ 15ನೇ ಹಂತದ ಕ್ರಿಯಾಯೋಜನೆಗೆ ಉನ್ನತ ಮಟ್ಟದ ಸಲಹಾ ಸಮಿತಿಯ ಸಭೆಯಲ್ಲಿ ಅನುಮೋದನೆಯನ್ನು ನೀಡಲಾಗಿದೆ

ಸರ್ಕಾರದ ಆದೇಶ ಸಂಖ್ಯೆ: ಪ್ರಇ 70 ಕೆಎಂಯು 2019, ದಿನಾಂಕ 09/12/2019ರನ್ವಯ 15ನೇ ಹಂತದ ಕ್ರಿಯಾಯೋಜನೆಯ ಕಾರ್ಯಕ್ರಮಕ್ಕೆ ಸರ್ಕಾರದ ವಂತಿಕೆಯಾದ ರೂ.139.00ಲಕ್ಷಗಳ ಪೈಕಿ ಮೊದಲ ಕಂತಾಗಿ ರೂ.80.00ಲಕ್ಷಗಳ (ರೂಪಾಯಿಗಳು ಎಂಭತ್ತು ಲಕ್ಷ ಮಾತ್ರ) ಅನುದಾನವನ್ನು ಲೆಕ್ಕ ಶೀರ್ಷಿಕೆ 2205-00-103-0-01 ಯೋಜನೆ 059 ಇತರೆ ಖರ್ಚುಗಳಡಿ ನಿರ್ದೇಶಕರು,
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್, ಬೆಂಗಳೂರು ಇವರಿಗೆ ಪೇಯೀಸ್ ರಸೀಟ್ ಮೂಲಕ ಬಿಡುಗಡೆ ಮಾಡಲಾಗಿದೆ.

## 27. ಬಾಹ್ಯ ಸಂಸ್ಥೆಯ ಮೂಲಕ ಅಗತ್ಯ ಸಿಬ್ಬಂದಿಯನ್ನು ನೇಮಕ ಮಾಡಿಕೊಂಡಿರುವುದು:-

ಈ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ರಾಜ್ಯ ಸಂರಕ್ಷಿತ ಸ್ಮಾರಕಗಳಿಗೆ ಹಾಗೂ ವಸ್ತುಸಂಗ್ರಹಾಲಯಗಳಿಗೆ ಭದ್ರತಾ ಸಿಬ್ಬಂದಿಯನ್ನು ಏಖಿಖಿ ನಿಯಮಾನುಸಾರ ಟೆಂಡರ್ ಕರೆದು ಬಾಹ್ಯ ಸಂಸ್ಥೆಯ ಮೂಲಕ ನೇಮಕ ಮಾಡಿಕೊಳ್ಳಲಾಗಿದೆ. ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಕಛೇರಿ ಕೆಲಸ ಕಾರ್ಯಗಳಿಗೆ ನಿಯಮಾನುಸಾರ ಈ ಕೆಳಕಂಡ ಸಿಬ್ಬಂದಿಗಳ ಸೇವೆಯನ್ನು ಬಾಹ್ಯ ಸಂಸ್ಥೆಯ ಮೂಲಕ ಪಡೆಯಲಾಗುತ್ತಿದೆ.

| ಕ್ರ.ಸಂ | ಬಾಹ್ಯ ಮೂಲದಿಂದ ಪಡೆದ ಸಿಬ್ಬಂದಿಯ ಪದನಾಮ | ವೃಂದ | ಹುದ್ದೆಗಳ ಸಂಖ್ಯೆ |
|---|---|---|---|
| 1 | ಪುರಾತತ್ವ ಸಂರಕ್ಷಣಾ ಸಹಾಯಕರು | ಸಿ | 02 |
| 2 | ಛಾಯಾಗ್ರಾಹಕರು | ಸಿ | 01 |
| 3 | ದ್ವಿತೀಯ ದರ್ಜೆ ಸಹಾಯಕರು | ಸಿ | 05 |
| 4 | ಬೆರಳಚ್ಚುಗಾರರು | ಸಿ | 03 |
| 5 | ವಾಹನ ಚಾಲಕರು | ಸಿ | 02 |
| 6 | ಗ್ರೂಪ್-ಡಿ | ಡಿ | 74 |
| | | ಒಟ್ಟು | **87** |

## 28. ಸಹಾಯಾನುದಾನ:

- ಹಂಪಿ ಅಭಿವೃದ್ಧಿ ಪ್ರದೇಶ ನಿರ್ವಹಣಾ ಪ್ರಾಧಿಕಾರದ ನಿರ್ವಹಣೆ:

2019-20ನೇ ಆರ್ಥಿಕ ಸಾಲಿನಲ್ಲಿ ಹಂಪಿ ಅಭಿವೃದ್ಧಿ ಪ್ರದೇಶ ನಿರ್ವಹಣಾ ಪ್ರಾಧಿಕಾರದ ನಿರ್ವಹಣೆಗೆ ರೂ.15.00ಲಕ್ಷವನ್ನು ಸರ್ಕಾರಿ ಆದೇಶದ ಮೇರೆಗೆ ಸಹಾಯಾನುದಾನವನ್ನು ಬಿಡುಗಡೆ ಮಾಡಲಾಗಿದೆ.

- ಚಾಲುಕ್ಯ ಪಾರಂಪರಿಕ ಅಭಿವೃದ್ಧಿ ಪ್ರಾಧಿಕಾರದ ನಿರ್ವಹಣೆ:

2019-20ನೇ ಆರ್ಥಿಕ ಸಾಲಿನಲ್ಲಿ ಚಾಲುಕ್ಯ ಅಭಿವೃದ್ಧಿ ಪ್ರಾಧಿಕಾರದ ಕಾರ್ಯಕ್ರಮಕ್ಕೆ ರೂ.37.50ಲಕ್ಷಗಳನ್ನು ಸರ್ಕಾರಿ ಮಂಜೂರಾತಿ ಆದೇಶದನ್ವಯ ಬಿಡುಗಡೆ ಮಾಡಲಾಗಿದೆ.

- ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರ:

ಸರ್ಕಾರಿ ಆದೇಶ ಸಂಖ್ಯೆ:ಕಸಂವಾ 89 ಕೆಎಂಯು 2017 ಬೆಂಗಳೂರು ದಿನಾಂಕ:16.08.2017ರ ಪ್ರಕಾರ ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರನ್ನು ನೇಮಿಸಿ ಸರ್ಕಾರದ ಆದೇಶವಾಗಿರುತ್ತದೆ. ಇದುವರೆವಿಗೂ ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರ ರಚನೆಯಾಗಿರುವುದಿಲ್ಲ.29.

## 29. ಸಂರಕ್ಷಿತ ಸ್ಮಾರಕಗಳ ಘೋಷಣೆ:

ಪ್ರಸಕ್ತ ಸಾಲಿನಲ್ಲಿ ಯಾವುದು ಇರುವುದಿಲ್ಲ.

## 30. ಇಲಾಖೆಯ ವೆಬ್‌ಸೈಟ್:

ಇಲಾಖೆಯ ವೆಬ್‌ಸೈಟ್‌ನಲ್ಲಿ (www.karnatakaarchaeology.gov.in) ಇಲಾಖೆಯ ಇತಿಹಾಸ, ಇಲಾಖೆಯ ಪ್ರಮುಖ ಚಟುವಟಿಕೆಗಳು, ಕಳೆದ ಮೂರು ವರ್ಷಗಳಲ್ಲಿ ಇಲಾಖೆ ಸಾಧಿಸಿದ ಪ್ರಗತಿಯ ವಿವರಗಳು, ವಾರ್ಷಿಕ ವರದಿಗಳು, ಇಲಾಖೆಯ ಅಧಿನಿಯಮ ಮತ್ತು ಉಪ ನಿಯಮಗಳ ವಿವರ, ಇಲಾಖೆಯ ಪ್ರಕಟಣೆಯ ವಿವರಗಳು, ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿತ ಮಾಹಿತಿ ಹಕ್ಕು ಅಧಿನಿಯಮ 4 (1)ಎ ಮತ್ತು 4(1) ಬಿ, ನಾಗರೀಕ ಸನ್ನದು ((citizen charter)), ಇಲಾಖೆಯ ಸಂರಕ್ಷಿತ ಸ್ಮಾರಕಗಳ ನಿರ್ದೇಶಿಕೆ ಮತ್ತು ಈ ಸ್ಮಾರಕಗಳ ಸಂಕ್ಷಿಪ್ತ ವಿವರಗಳನ್ನೊಳಗೊಂಡ ಮಾಹಿತಿ, ಇಲಾಖೆಗೆ ಸಂಬಂಧಪಟ್ಟ ಪ್ರಮುಖ ಆದೇಶಗಳು, ಇಲಾಖೆಯ ಪ್ರಮುಖ ವಿದ್ಯಮಾನಗಳು (News & Events), ಟೆಂಡರ್‌ಗಳ ಕುರಿತು ಮಾಹಿತಿ, ಸಾರ್ವಜನಿಕ ಆಕ್ಷೇಪಣೆ ಮತ್ತು ಮಾಹಿತಿಗಾಗಿ Query ಸಲ್ಲಿಸಬಹುದಾಗಿದೆ, ಎಫ್.ಎ.ಕ್ಯೂ ಇನ್ನಿತರ ಮಾಹಿತಿಯನ್ನು ಒಳಗೊಂಡಿರುತ್ತದೆ.

## 31. ತಾಂತ್ರಿಕ ಸಲಹಾ ಸಮಿತಿ :-

ಸರ್ಕಾರದ ಆದೇಶದ ಸಂಖ್ಯೆ: ಕಸಂವಾ 94 ಕೆಎಂಯು 2018 ದಿನಾಂಕ:24.09.2018ರಲ್ಲಿ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿ ನೀಡುವ ಸಮಿತಿಯ ಅಧಿಕಾರೇತರ ಸದಸ್ಯರನ್ನು ಪುನರ್‌ರಚಿಸಿ ದಿನಾಂಕ 01.04.2018 ರಿಂದ 31.03.2020ರವರೆಗೆ ಮೂರು ವರ್ಷದ ಅವಧಿಗೆ ಮುಂದುವರೆಸಿ ಆದೇಶಿಸಿದೆ. ವಿವರ ಇಂತಿದೆ;

- ಶ್ರೀ ಬಿ.ಅಶ್ವತ್ಥನಾರಾಯಣ, ನಿವೃತ್ತ ಕಾರ್ಯದರ್ಶಿ, ಕರ್ನಾಟಕ ಲೋಕೋಪಯೋಗಿ ಇಲಾಖೆ.
- ಡಾ॥ ಹೆಚ್.ಎಂ.ಸಿದ್ದನಗೌಡರ್, ನಿವೃತ್ತ ನಿರ್ದೇಶಕರು, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ.
- ಶ್ರೀ ಪರಮಾನಂದನ್, ನಿವೃತ್ತ ಉಪಪುರಾತತ್ವ ಅಧೀಕ್ಷಕ ಇಂಜಿನಿಯರ್, ಭಾರತೀಯ ಪುರಾತತ್ವ ಸರ್ವೇಕ್ಷಣಾ.

## 32. ಇಲಾಖೆಯ ಗ್ರಂಥಾಲಯ:-

ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ವತಿಯಿಂದ ಮೈಸೂರಿನ ಅರಮನೆಯ ಆವರಣದಲ್ಲಿ ಒಂದು ಗ್ರಂಥಾಲಯವಿದ್ದು, ಈ ಗ್ರಂಥಾಲಯದಲ್ಲಿ ಪುರಾತತ್ವ, ಇತಿಹಾಸ ವಿಷಯಗಳ ಕುರಿತಂತೆ ಒಂದು ಪುಸ್ತಕ ಬಂಡಾರವಿದ್ದು, ಸುಮಾರು 18398 ಪುಸ್ತಕಗಳನ್ನು ಸಂಗ್ರಹಿಸಲಾಗಿದೆ. ಈ ಗ್ರಂಥಾಲಯಕ್ಕೆ ಬರುವ ವಿದ್ವಾಂಸರಿಗೆ, ಸಂಶೋಧಕರಿಗೆ ಮತ್ತು ಸಾರ್ವಜನಿಕರಿಗೆ ಮುಕ್ತ ಪ್ರವೇಶವಿದೆ. ಆಸಕ್ತರು ಇದರ ಉಪಯೋಗವನ್ನು ಪಡೆಯುತ್ತಿದ್ದಾರೆ.

## 33. 2019-20ನೇ ಸಾಲಿನಲ್ಲಿ ವಿಧಾನಸಭೆ/ ವಿಧಾನ ಪರಿಷತ್/ ಭರವಸೆ/ ಲೋಕಸಭಾ ಪ್ರಶ್ನೆ ಇವುಗಳಿಗೆ ಸಂಬಂಧಿಸಿದ ವಿವರಗಳು:

| ಕ್ರಮ ಸಂ. | ವಿಷಯ | ವಿಧಾನ ಸಭೆ | ವಿಧಾನ ಪರಿಷತ್ | ಗಮನ ಸೆಳೆಯುವ ಸೂಚನೆಗಳು | ಭರವಸೆ | | ಲೋಕಸಭಾ ಪ್ರಶ್ನೆ | ರಾಜ್ಯಸಭೆ |
|---|---|---|---|---|---|---|---|---|
| | | | | | ವಿಧಾನ ಸಭೆ | ವಿಧಾನ ಪರಿಷತ್ | | |
| 1) | ಆಡಳಿತಾತ್ಮಕ ವಿಷಯಗಳು | 03 | 14 | 00 | 00 | 00 | 00 | 02 |
| 2) | ವಸ್ತು ಸಂಗ್ರಹಾಲಯ ಕುರಿತಂತೆ | 00 | 01 | 00 | 00 | 00 | 01 | 00 |
| 3) | ಸಂರಕ್ಷಣಾ ವಿಷಯಗಳು | 08 | 01 | 00 | 08 | 02 | - | 01 |
| 4) | ಪರಂಪರೆ ವಿಭಾಗ | 04 | - | - | - | - | - | - |
| 5) | ಆಯವ್ಯಯ ವಿಭಾಗ | - | - | - | - | - | - | - |
| | **ಒಟ್ಟು** | **15** | **16** | **00** | **18** | **02** | **01** | **03** |

*** ಸಂರಕ್ಷಣಾ ವಿಷಯಗಳ ವಿಧಾನಸಭೆ ಭರವಸೆಗಳ 16ರ ಪೈಕಿ 08 ಇತ್ಯರ್ಥಗೊಂಡಿರುತ್ತವೆ.**

## 34. ಲೆಕ್ಕ ಪರಿಶೋಧನೆಗೆ ಸಂಬಂಧಿಸಿದಂತೆ ಕಛೇರಿವಾರು ಬಾಕಿ ಇರುವ ಕಂಡಿಕೆಗಳ ವರದಿ:

ಈ ಇಲಾಖೆಯಲ್ಲಿ ಪ್ರಸ್ತುತ 41 ಆಡಿಟ್ ಪ್ಯಾರಾಗಳು ಬಾಕಿ ಇವೆ. ಈ ಆಡಿಟ್ ಪ್ಯಾರಾಗಳಿಗೆ ಕಂಡಿಕೆವಾರು ಉತ್ತರವನ್ನು ನೀಡಲಾಗಿದೆ. 2017-18ನೇ ಸಾಲಿನಲ್ಲಿ ಇಲಾಖೆಯ ಆಡಿಟ್ ಆಗಿರುತ್ತದೆ.

## 35. ಅಧಿಕಾರಿಗಳು ಹೊರ ರಾಜ್ಯಕ್ಕೆ ಇಲಾಖಾ ಕರ್ತವ್ಯದ ಮೇರೆಗೆ ಪ್ರವಾಸ ಕೈಗೊಂಡಿದ್ದ ವಿವರ ಮತ್ತು ಉದ್ದೇಶ:

ಇಲಾಖೆಯ ಆಯುಕ್ತರು ರಾಜ್ಯದಲ್ಲಿ ನಡೆಯುತ್ತಿರುವ ಪುರಾತನ ವಿಗ್ರಹಗಳು ಮತ್ತು ಇತರ ಪ್ರಾಚ್ಯವಶೇಷಗಳ ಕಳ್ಳತನ ಮತ್ತು ಅದನ್ನು ಇತರೆ ದೇಶ ಮತ್ತು ರಾಜ್ಯಗಳಿಗೆ ಮಾರುವ ಪ್ರಕರಣಗಳನ್ನು ತಡೆಗಟ್ಟುವ ಉದ್ದೇಶದಿಂದ ಈಗಾಗಲೇ ತಮಿಳುನಾಡಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಐ.ಜಿ, ಡಿ.ಐ.ಜಿ.ಗಳನ್ನೊಳಗೊಂಡ ಐಡಲ್ ವಿಂಗ್ ಎಂಬ ಸಂಸ್ಥೆಯನ್ನು ಕರ್ನಾಟಕದಲ್ಲೂ ರಚಿಸುವ ಉದ್ದೇಶದಿಂದ ತಮಿಳುನಾಡಿನ ಗಿಂಡಿ ಎಂಬ ಊರಿಗೆ ಪ್ರವಾಸ ಮಾಡಿ ಅಲ್ಲಿನ ಅಧಿಕಾರಿಗಳನ್ನು ಬೇಟಿ ಮಾಡಿ ಇದರ ಕಾರ್ಯನಿರ್ವಹಣೆಯ ಬಗ್ಗೆ ಮಾಹಿತಿ ಪಡೆಯಲಾಯಿತು.

| | | | |
|---|---|---|---|
| 9) | ಮೈಸೂರು ಜಿಲ್ಲಾ ತರಬೇತಿ ಸಂಸ್ಥೆಯಲ್ಲಿ ಇ-ಪರ್ಫಾಮೆನ್ಸ್ ರಿಪೋರ್ಟಿಂಗ್ ಸಿಸ್ಟಮ್ (e-Performance Reporting System) ಬಗ್ಗೆ ತರಬೇತಿ | 01 | -- |
| 10) | e-gov. financial (FBAS) of Municipalities ವಿಷಯದ ಕುರಿತು ರಾಜ್ಯ ನಗರಾಭಿವೃದ್ಧಿ ಸಂಸ್ಥೆ, ಮೈಸೂರು ದಿನಾಂಕ:21.10.2019 ರಿಂದ 23.10.2019ರವರೆಗೆ | -- | 01 (ತಾಂತ್ರಿಕೇತರ) |
| 11) | ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ & ಲೆಕ್ಕಪತ್ರ ಇಲಾಖೆಯ 'ಸಿ' ಗುಂಪಿನ ಸಿಬ್ಬಂದಿಯವರಿಗೆ ಮಾಡ್ಯೂಲ್-1, 2 ಮತ್ತು 3, 8ರ ವಿಷಯದ ತರಬೇತಿ ದಿನಾಂಕ:10.02.2020ರಿಂದದಿನಾಂಕ:04.03.2020ರವರೆಗೆ | -- | 01 (ತಾಂತ್ರಿಕೇತರ) |

**ಹೊರ ರಾಜ್ಯದಲ್ಲಿ ಜರುಗಿದ ತರಬೇತಿ/ವಿಚಾರ ಸಂಕಿರಣ/ಕಾರ್ಯಾಗಾರ ಇವುಗಳಲ್ಲಿ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಭಾಗವಹಿಸಿದ ವಿವರ:**

| ಕ್ರ.ಸಂ. | ಕಾರ್ಯಗಾರದ ವಿಷಯ, ಸ್ಥಳ ಮತ್ತು ದಿನಾಂಕ | ನಿಯೋಜಿಸಿರುವ ಅಧಿಕಾರಿಗಳ ಸಂಖ್ಯೆ | ನಿಯೋಜಿಸಿರುವ ಸಿಬ್ಬಂದಿಗಳ ಸಂಖ್ಯೆ |
|---|---|---|---|
| 1) | Workshop on Museums in India – Strength and Uniqueness on 27th June 2019 at Bihar Museum, Patna, Bihar. | 01 | – |

## 37. ನಿವೃತ್ತಿ:

2019-20ನೇ ಸಾಲಿನಲ್ಲಿ ಗ್ರೂಪ್ 'ಡಿ' -03 ಸಿಬ್ಬಂದಿಗಳು ವಯೋಮಾನ ನಿವೃತ್ತಿಯನ್ನು ಹೊಂದಿರುತ್ತಾರೆ.

## 38. ನ್ಯಾಯಾಲಯದ ಪ್ರಕರಣಗಳ ವಿವರಗಳು:

| ಕ್ರ.ಸಂ | ನ್ಯಾಯಾಲಯದ ಪ್ರಕರಣಗಳು | 2018-19ನೇ ಸಾಲಿನಲ್ಲಿ ಬಾಕಿ ಇರುವ ಪ್ರಕರಣಗಳು | 2019-20ನೇ ಸಾಲಿನಲ್ಲಿ ದಾಖಲಾದ ಪ್ರಕರಣಗಳು | ಇತ್ಯರ್ಥವಾಗಿರುವ ಪ್ರಕರಣಗಳು | ಇತ್ಯರ್ಥ ಆಗಬೇಕಾದ ಪ್ರಕರಣಗಳು |
|---|---|---|---|---|---|
| 1 | ಸರ್ವೋಚ್ಚ ನ್ಯಾಯಾಲಯ, ನವದೆಹಲಿ (ಸುಪ್ರೀಮ್ ಕೋರ್ಟ್) | 03 | -- | -- | 03 |
| 2 | ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು, ಕಲಬುರಗಿ, ಧಾರವಾಡ (ಹೈಕೋರ್ಟ್) | 91 | 11 | 05 | 97 |

36. **ಇಲಾಖೆಯಲ್ಲಿ ಅಧಿಕಾರಿ ಹಾಗೂ ಸಿಬ್ಬಂದಿಗಳು ಪಡೆದ ತರಬೇತಿಗಳ ವಿವರಗಳು:**

**2019-20ನೇ ಸಾಲಿನಲ್ಲಿ ತರಬೇತಿಗಳ ವಿವರ ಇಂತಿವೆ.**

| ಕ್ರ.ಸಂ. | ತರಬೇತಿ ವಿಷಯ ಮತ್ತು ಸ್ಥಳ ಮತ್ತು ದಿನಾಂಕ | ನಿಯೋಜಿಸಿರುವ ಅಧಿಕಾರಿಗಳ ಸಂಖ್ಯೆ | ನಿಯೋಜಿಸಿರುವ ಸಿಬ್ಬಂದಿಗಳ ಸಂಖ್ಯೆ |
|---|---|---|---|
| 1) | "Integrated Pest Management In Museums – A Modern Approach" ಕುರಿತು 2 ದಿನಗಳ ಕಾರ್ಯಗಾರ ದಿನಾಂಕ:20.05.2019 ಮತ್ತು 21.05.2019ರಂದು ಎರಡು ದಿನಗಳವರೆಗೆ ಮೈಸೂರಿನ ಸಿದ್ದಾರ್ಥನಗರದ ರೀಜಿನಲ್ ಕನ್ಸ್‌ರ್ವೇಷನ್ ಲ್ಯಾಬೊರೇಟರಿ ಇಲ್ಲಿ ಆಯೋಜಿಸಲಾಗಿದೆ. | 03 | 02 |
| 2) | Court Procedure for Effective Office Management ದಿನಾಂಕ:27.06.2019ರಿಂದ 29.06.2019ರವೆಗೆ | 05 | -- |
| 3) | "ಸರಕು ಮತ್ತು ಸೇವೆಗಳ ತೆರಿಗೆ ಹಾಗೂ ಆದಾಯ ತೆರಿಗೆ" ಕುರಿತು ಗಣಕಯಂತ್ರ ಆಧಾರಿತ ತರಬೇತಿ. ದಿನಾಂಕ:02.07.2019ರಿಂದ ದಿನಾಂಕ:04.07.2019ರವರೆಗೆ, ಜಿಲ್ಲಾ ತರಬೇತಿ ಸಂಸ್ಥೆ, ಮೈಸೂರು. | -- | 01 (ತಾಂತ್ರಿಕೇತರ) |
| 4) | "ಖಜಾನೆ-2 (Khajane-II) ತಂತ್ರಾಂಶ" ಕುರಿತು ಗಣಕಯಂತ್ರ ಆಧಾರಿತ ತರಬೇತಿ. ದಿನಾಂಕ:08.07.2019ರಿಂದ ದಿನಾಂಕ:09.07.2019ರವರೆಗೆ ಜಿಲ್ಲಾ ತರಬೇತಿ ಸಂಸ್ಥೆ, ಮೈಸೂರು. | - | 02 (ತಾಂತ್ರಿಕೇತರ) |
| 5) | "ಆಯವ್ಯಯ ತಯಾರಿಕೆ, ಲೆಕ್ಕಪತ್ರ ತಯಾರಿಕೆ ಮತ್ತು ಆರ್ಥಿಕ ನಿರ್ವಹಣೆ" (Financial Management) ಕುರಿತು ತರಬೇತಿ. ದಿನಾಂಕ:11.07.2019ರಿಂದ ದಿನಾಂಕ:12.07.2019ರವರೆಗೆ, ಜಿಲ್ಲಾ ತರಬೇತಿ ಸಂಸ್ಥೆ, ಮೈಸೂರು. | - | 02 (ತಾಂತ್ರಿಕೇತರ) |
| 6) | Public Records Act 2010ರಂತೆ ದಾಖಲೆಗಳ ನಿರ್ವಹಣೆ ಕುರಿತ ಕಾರ್ಯಗಾರ ದಿನಾಂಕ:28.11.2019ರಿಂದ ದಿನಾಂಕ:29.11.2019ರವರೆಗೆ, ವಿಭಾಗೀಯ ಪತ್ರಾಗಾರ ಕಛೇರಿ, ಮೈಸೂರು | 01 | 02 (ತಾಂತ್ರಿಕೇತರ) |
| 7) | "Information Technology for Effective office Management" ತರಬೇತಿ, ದಿನಾಂಕ:25.11.2019ರಿಂದ 29.11.2019ರವರೆಗೆ, ಆಡಳಿತ ತರಬೇತಿ ಸಂಸ್ಥೆ, ಮೈಸೂರು | 03 | 01 (ತಾಂತ್ರಿಕ) |
| 8) | ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ & ಲೆಕ್ಕಪತ್ರ ಇಲಾಖೆಯ ಸಿಬ್ಬಂದಿಯವರಿಗೆ ಪಂಚತಂತ್ರ ತಂತ್ರಾಂಶದ ತರಬೇತಿ, ದಿನಾಂಕ 05.08.2019 ರಿಂದ ದಿನಾಂಕ 07.08.2019ರವರೆಗೆ ಜಿಲ್ಲಾ ತರಬೇತಿ ಸಂಸ್ಥೆ, ಮೈಸೂರು | -- | 01 (ತಾಂತ್ರಿಕೇತರ) |

| | | | | | |
|---|---|---|---|---|---|
| 3 | ತಾಲ್ಲೂಕು ಮತ್ತು ಜಿಲ್ಲಾ ನ್ಯಾಯಾಲಯ | 07 | 02 | 02 | 07 |
| 4 | ಜಿಲ್ಲಾಧಿಕಾರಿ/ವಕ್ಫ್‌ರವರ ನ್ಯಾಯಾಲಯ | 02 | 01 | – | 03 |
| 5 | ಕರ್ನಾಟಕ ಆಡಳಿತ ನ್ಯಾಯಮಂಡಳಿ, ಬೆಂಗಳೂರು | 02 | – | -- | 02 |
| | ಒಟ್ಟು | **105** | **14** | **07** | **112** |

ಈ ರೀತಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಕಾರ್ಯಚಟುವಟಿಕೆಗಳು ಮುಂದುವರಿಯುತ್ತಿವೆ.

T. ✓

ಆಯುಕ್ತರು
ಪುರಾತತ್ವ, ಸಂಗ್ರಹಾಲಯಗಳು ಮತ್ತು
ಪರಂಪರೆ ಇಲಾಖೆ, ಮೈಸೂರು